# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಅಕ್ಟೋಬರ್ 07, 2021

ಸಂಪುಟ : 48 ಸಂಚಿಕೆ : 147 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




**ಮಳೆ..ಮಳೆ..**

ದಾವಣಗೆರೆ ನಗರದಲ್ಲಿ ಬುಧವಾರ ಉತ್ತಮ ಮಳೆಯಾಯಿತು. ಮುಂಜಾನೆಯೇ ದಟ್ಟವಾದ ಮೋಡ ಕವಿದು ಮಳೆ ಸುರಿಯಲಾರಂಭಿಸಿತು. ನಂತರ ತುಸು ಹೊತ್ತು ಬಿಡುವು ನೀಡುತ್ತಿದ್ದ ಮಳೆ ಸಂಜೆ, ರಾತ್ರಿ ಸುರಿಯುತ್ತಲೇ ಇತ್ತು. ಮಳೆಯ ನಡುವೆಯೇ ಎತ್ತಿನಗಾಡಿಯೊಂದರಲ್ಲಿ ಪೈಪ್‌ಗಳನ್ನು ತೆಗೆದುಕೊಂಡು ಹೋಗುತ್ತಿರುವ ದೃಶ್ಯವಿದು.

# ರಾಜ್ಯ ಸೇರಿ 7 ಕಡೆ ಜವಳಿ ಪಾರ್ಕ್

## 4,445 ಕೋಟಿ ರೂ.ಗಳ ಯೋಜನೆಗೆ ಕೇಂದ್ರ ಸಂಪುಟದ ಒಪ್ಪಿಗೆ

ನವದೆಹಲಿ, ಅ. 6 – ದೇಶದ ಏಳು ಕಡೆಗಳಲ್ಲಿ ಬೃಹತ್ ಸಮಗ್ರ ಜವಳಿ ಪ್ರದೇಶ ಮತ್ತು ಉಡುಪು ಪಾರ್ಕ್ (ಪಿಎಂ - ಮಿತ್ರ) ಸ್ಥಾಪಿಸಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಈ ಪಾರ್ಕ್‌ಗಳಿಗಾಗಿ ಐದು ವರ್ಷಗಲ್ಲಿ 4,445 ಕೋಟಿ ರೂ. ವೆಚ್ಚ ಮಾಡಲಾಗುವುದು.

ಈ ಬಗ್ಗೆ ಹೇಳಿಕೆ ನೀಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಪಿಎಂ - ಮಿತ್ರ ಪಾರ್ಕ್‌ಗಳಿಂದ ಜವಳಿ ವಲಯಕ್ಕೆ ಉತ್ತೇಜನ ಸಿಗಲಿದೆ. ಉದ್ಯೋಗಾವಕಾಶ ಹೆಚ್ಚಾಗಿ ಸಾಗಣೆ ವೆಚ್ಚ ಕಡಿಮೆಯಾಗಲಿದೆ ಎಂದು ತಿಳಿಸಿದ್ದಾರೆ.

2021-22ರ ಬಜೆಟ್‌ನಲ್ಲಿ ಬೃಹತ್ ಜವಳಿ ಪಾರ್ಕ್‌ಗಳ ಸ್ಥಾಪನೆ ಮಾಡುವುದಾಗಿ ಪ್ರಕಟಿಸಲಾಗಿತ್ತು. ರಾಜ್ಯಗಳು ಸಮ್ಮತಿಸುವ ಸ್ಥಳಗಳಲ್ಲಿ ಪಾರ್ಕ್ ಜಾರಿಗೆ ಬರಲಿದೆ

ಸಾವಿರ ಎಕರೆ ಪ್ರದೇಶದಲ್ಲಿ ಪ್ರಸ್ತಾಪಿತ ಪಾರ್ಕ್ ಸ್ಥಾಪನೆಯಾಗಲಿದೆ. ಇದರ ಜೊತೆಗೆ ಜವಳಿ ಸಂಬಂಧದ ಎಲ್ಲ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.



**ಹೊಲದಿಂದ ನಾರಿನವರೆಗೆ, ಕಾರ್ಖಾನೆಯಿಂದ ವಿನ್ಯಾಸದವರೆಗೆ, ವಿನ್ಯಾಸದಿಂದ ವಿದೇಶಕ್ಕೆ ರವಾನೆವರೆಗೆ ಒಂದೇ ಸ್ಥಳದಲ್ಲಿ ಸಕಲ ಸೌಲಭ್ಯ**

ಸಂಪುಟ ಸಭೆಯ ನಂತರ ಈ ಬಗ್ಗೆ ವಿವರ ನೀಡಿರುವ ಜವಳಿ ಸಚಿವ ಪಿಯೂಶ್ ಗೋಯಲ್, ಹತ್ತು ರಾಜ್ಯಗಳು ಈಗಾಗಲೇ ಪಾರ್ಕ್‌ಗಳ ಸ್ಥಾಪನೆಗೆ ಆಸಕ್ತಿ ತೋರಿವೆ ಎಂದು ತಿಳಿಸಿದ್ದಾರೆ.

ತಮಿಳುನಾಡು, ಪಂಜಾಬ್, ಒಡಿಶಾ, ಆಂಧ್ರ ಪ್ರದೇಶ, ಗುಜರಾತ್, ರಾಜಸ್ಥಾನ, ಅಸ್ಸಾಂ, ಮಧ್ಯ ಪ್ರದೇಶ, ಕರ್ನಾಟಕ ಹಾಗೂ ತೆಲಂಗಾಣಗಳು ಪಾರ್ಕ್ ಸ್ಥಾಪನೆಗೆ ಆಸಕ್ತಿ ಹೊಂದಿವೆ.

ಸವಾಲು ಪದ್ಧತಿ ಆಧಾರದ ಮೇಲೆ ಮಾನದಂಡ ಹೊಂದಿದ ತಾಣಗಳಲ್ಲಿ ಪಾರ್ಕ್‌ಗಳನ್ನು ಸ್ಥಾಪನೆ ಮಾಡಲಾಗುವುದು.

ಈ ಪಾರ್ಕ್‌ಗಳಿಂದ ನೇರವಾಗಿ 7 ಲಕ್ಷ ಜನರು ಹಾಗೂ ಪರೋಕ್ಷವಾಗಿ 14 ಲಕ್ಷ ಜನರಿಗೆ ಉದ್ಯೋಗ ಸಿಗಲಿದೆ.

ಒಂದೇ ಸ್ಥಳದಲ್ಲಿ ಜವಳಿ ಉತ್ಪಾದನೆಗೆ ಅಗತ್ಯವಾದ ಎಲ್ಲ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಲಾಗುವುದು. ನೇಯ್ಗೆ, ಹೊಲಿಯುವುದು, ಸಂಸ್ಕರಿಸುವುದು, ಡೈಯಿಂಗ್, ಪ್ರಿಂಟಿಂಗ್ ಸೇರಿ ಎಲ್ಲವನ್ನೂ ಒಳಗೊಂಡ ಸಮಗ್ರ ಜವಳಿ ಮೌಲ್ಯ ಸರಣಿ ಸೃಷ್ಟಿಸಲಾಗುವುದು.

ಗ್ರೀನ್‌ಫೀಲ್ಡ್ ಹಾಗೂ ಬ್ರೌನ್‌ಫೀಲ್ಡ್ ಎಂಬ ಎರಡು ರೀತಿಯ ಪಾರ್ಕ್‌ಗಳು (3ನೇ ಪುಟಕ್ಕೆ)

# ಸ್ವಾತಂತ್ರ್ಯ ದೊರೆತು 75 ವರ್ಷಗಳಾದರೂ ಸಮಾನರಾಗಿಲ್ಲ

ನವದೆಹಲಿ, ಅ. 6 – ಸ್ವತಂತ್ರ ದೊರೆತು 75 ವರ್ಷಗಳಾಗಿದ್ದರೂ ಪರಿಶಿಷ್ಟ ಜಾತಿ ಹಾಗೂ ಪಂಗಡದವರನ್ನು ಮುಂದುವರೆದ ವರ್ಗಗಳ ಅರ್ಹತಾ ಮಟ್ಟಕ್ಕೆ ತರಲು ಸಾಧ್ಯವಾಗಿಲ್ಲ ಎಂದು ಸುಪ್ರೀಂ ಕೋರ್ಟ್ ಎದುರು ಕೇಂದ್ರ ಸರ್ಕಾರ ತಿಳಿಸಿದೆ.

ನ್ಯಾಯಮೂರ್ತಿ ಎಲ್. ನಾಗೇಶ್ವರ ರಾವ್ ಅವರ ನೇತೃತ್ವದ ಪೀಠದ ಎದುರು ಹಾಜರಾದ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್, ಎ ವರ್ಗದ ಹುದ್ದೆಗಳಿಗೆ ಬರುವುದು ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಹೆಚ್ಚು ಕಷ್ಟವಾಗುತ್ತಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳವರಿಗೆ ಸುಪ್ರೀಂ ಕೋರ್ಟ್ ಹೆಚ್ಚು ಉತ್ತೇಜನ ನೀಡುವ ಸಮಯ ಬಂದಿದೆ ಎಂದು ಹೇಳಿದ್ದಾರೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಉದ್ಯೋಗಿಗಳಿಗೆ ಪದೋನ್ನತಿಯಲ್ಲಿ ಉತ್ತೇಜನ ನೀಡುವ ಕುರಿತು ವಿಚಾರಣೆ ನಡೆಸುವಾಗ ಅಟಾರ್ನಿ ಜನರಲ್ ಸರ್ಕಾರದ ನಿಲುವು ತಿಳಿಸಿದ್ದಾರೆ.

ಎ ದರ್ಜೆಯ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಪ್ರಾತಿನಿಧ್ಯ ಕಡಿಮೆ ಇದೆ. ಇದನ್ನು ಹೆಚ್ಚಿಸುವ ಬದಲು ಬಿ ಮತ್ತು ಸಿ ದರ್ಜೆಯಲ್ಲಿ ಸಮರ್ಪಕ ಪ್ರಾತಿನಿಧ್ಯಕ್ಕೆ ಕ್ರಮಕ್ಕೆ ಸೀಮಿತವಾಗುವುದು ಸೂಕ್ತವಲ್ಲ ಎಂದು ಅಟಾರ್ನಿ ಜನರಲ್ ಹೇಳಿದ್ದಾರೆ. ಮುಂದುವರೆದು ವಾದ ಮಂಡಿಸಿದ ಅಟಾರ್ನಿ ಜನರಲ್ ಎ ಹಾಗೂ ಬಿ ದರ್ಜೆಯ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ - ಪಂಗಡಗಳ ಪ್ರಾತಿನಿಧ್ಯ ಕಡಿಮೆ ಇದೆ. ಮತ್ತೊಂದೆಡೆ ಸಿ ಹಾಗೂ ಡಿ ದರ್ಜೆಯಲ್ಲಿ ಈ ವರ್ಗಗಳ ಪ್ರಾತಿನಿಧ್ಯ ಅತಿ ಹೆಚ್ಚಾಗಿದೆ ಎಂದಿದ್ದಾರೆ.

**ಪರಿಶಿಷ್ಟರನ್ನು ಅರ್ಹತಾ ಮಟ್ಟಕ್ಕೆ ತರಲು ಸಾಧ್ಯವಾಗಿಲ್ಲ ಸುಪ್ರೀಂ ಕೋರ್ಟ್ ಎದುರು ಕೇಂದ್ರ ಸರ್ಕಾರದ ಅರ್ಜಿ**

75 ವರ್ಷಗಳ ನಂತರವೂ ಪರಿಶಿಷ್ಟ ಜಾತಿ ಹಾಗೂ ಪಂಗಡದವರನ್ನು ಮುಂದುವರೆದ ವರ್ಗಗಳ ಅರ್ಹತಾ ಹಂತಕ್ಕೆ ತರಲು ಸಾಧ್ಯವಾಗಿಲ್ಲ. ಪ್ರಸಕ್ತ ಎ ಹಂತದ ಹುದ್ದೆಗಳಿಗೆ ಅರ್ಹತೆ ಹಾಗೂ ದಕ್ಷತೆಯನ್ನು ಮಾತ್ರ ಪರಿಗಣಿಸಲಾಗುತ್ತಿದೆ. ಅಭ್ಯರ್ಥಿಗಳ ಹಿಂದುಳಿದಿರುವಿಕೆಯನ್ನು ಪರಿಗಣಿಸುತ್ತಿಲ್ಲ. ನ್ಯಾಯಾಲಯ ಹುದ್ದೆಗಳನ್ನು ತುಂಬುವಾಗ ಪರಿಶಿಷ್ಟ ಜಾತಿ, ಪಂಗಡ ಹಾಗೂ ಒ.ಬಿ.ಸಿ. ವರ್ಗದವರಿಗೆ ಸೂಕ್ತ ಆಧಾರ ನೀಡುವ ಸಮಯ ಬಂದಿದೆ ಎಂದು ಅಟಾರ್ನಿ ಜನರಲ್ ಹೇಳಿದ್ದಾರೆ.

ಆದರೆ, ಇತರೆ ಹಿಂದುಳಿದ ವರ್ಗಗಳಿಗೆ ಬಡ್ತಿಯಲ್ಲಿ ಮೀಸಲಾತಿ ಕಲ್ಪಿಸುವ ಬಗ್ಗೆ ಪರಿಗಣಿಸುವುದಿಲ್ಲ. ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಬಡ್ತಿ ಮೀಸಲಾತಿ ವಿಷಯ ಮಾತ್ರ ಪರಿಗಣಿಸುವುದಾಗಿ ನ್ಯಾಯಾಲಯ ಹೇಳಿದೆ.

ಬಡ್ತಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಮೀಸಲಾತಿ ಕಲ್ಪಿಸುವ ಕುರಿತ ಹಿಂದಿನ ತೀರ್ಪು ಗಳನ್ನು ಮರು ಪರಿಶೀಲಿಸುವುದಿಲ್ಲ. ಯಾವ ರೀತಿ ಮೀಸ ಲಾತಿ ಜಾರಿಗೆ ತರಬೇಕು ಎಂಬ ಬಗ್ಗೆ ನಿರ್ಧಾರ ತೆಗೆದು ಕೊಳ್ಳುವುದು ರಾಜ್ಯಗಳಿಗೆ ಬಿಟ್ಟಿದ್ದು ಎಂದು ಸುಪ್ರೀಂ ಕೋರ್ಟ್ ಕಳೆದ ಸೆಪ್ಟೆಂಬರ್ 14ರಂದು ತಿಳಿಸಿತ್ತು.

# ದಸರಾ ಕಾರ್ಯಕ್ರಮ : 400ಕ್ಕಿಂತ ಹೆಚ್ಚು ಜನ ಸೇರುವಂತಿಲ್ಲ ; ಡಿಸಿ



ದಾವಣಗೆರೆ, ಅ. 6- ಕೋವಿಡ್-19 ಸೋಂಕು ನಿಯಂತ್ರಣಕ್ಕಾಗಿ ಹಾಗೂ ಇಂದಿನಿಂದ 15 ರ ಶುಕ್ರವಾರದವರೆಗೆ 9 ದಿನಗಳ ಕಾಲ ಆಚರಿಸುವ ದಸರಾ ಹಬ್ಬವನ್ನು ಸರಳವಾಗಿ ಆಚರಿಸಲು ರಾಜ್ಯ ಸರ್ಕಾರ ನಿರ್ಬಂಧಿಸಿರುವ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಜಿಲ್ಲೆಯಲ್ಲಿ ಕಟ್ಟುನಿಟ್ಟಿನ ಕ್ರಮ ಜಾರಿಗೊಳಿಸಿದ್ದಾರೆ.

ಮೈಸೂರು ದಸರಾ ಹೊರತಾಗಿ ರಾಜ್ಯದ ಇತರೆಡೆ ನಡೆಸಲಾಗುವ ದಸರಾ ಕಾರ್ಯಕ್ರಮಗಳಲ್ಲಿ 400 ಕ್ಕಿಂತ ಹೆಚ್ಚು ಜನರು ಒಮ್ಮೆಲೆ ಸೇರುವಂತಿಲ್ಲ. ಸಾಮಾಜಿಕ ಅಂತರವನ್ನು ಕಡ್ಡಾಯವಾಗಿ ಪಾಲಿಸಬೇಕು. ದಸರಾ ಆಚರಣೆಯಲ್ಲಿ ಭಾಗವಹಿಸುವ ಕರ್ತವ್ಯ ನಿರತ ಸಿಬ್ಬಂದಿಗಳು, ಅಧಿಕಾರಿಗಳು, ಕಲಾವಿದರು, ರಕ್ಷಣಾ ಸಿಬ್ಬಂದಿಗಳು ಮತ್ತು ಮಾಧ್ಯಮದವರೂ ಒಳಗೊಂಡಂತೆ ಎಲ್ಲರೂ ಅಕ್ಟೋಬರ್ 4 ರ ನಂತರ ಕೋವಿಡ್ ಆರ್‌ಟಿಪಿಸಿಆರ್ ತಪಾಸಣೆ ನಡೆಸಿ ಸೋಂಕು ಇಲ್ಲದ ಬಗ್ಗೆ ಪ್ರಮಾಣ ಪತ್ರ ಪಡೆಯಬೇಕು ಮತ್ತು ಇವರೆಲ್ಲರೂ ಕನಿಷ್ಠ 1 ಡೋಸ್ ಕೋವಿಡ್ ಲಸಿಕೆ (3ನೇ ಪುಟಕ್ಕೆ)

# ತರಳಬಾಳು ಶ್ರೀಗಳ ಕೆರೆ ವೀಕ್ಷಣೆ ರದ್ದು



ಸಿರಿಗೆರೆ, ಅ.6- ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಗಳವರು ನಾಳೆ ದಿನಾಂಕ 7ರ ಗುರುವಾರ ಕೈಗೊಂಡಿದ್ದ ಭರಮಸಾಗರ ಕೆರೆ ವೀಕ್ಷಣಾ ಕಾರ್ಯಕ್ರಮವನ್ನು ಮಳೆಯ ಕಾರಣದಿಂದಾಗಿ ರದ್ದುಪಡಿಸಲಾಗಿದೆ. ಮುಂದಿನ ದಿನಾಂಕವನ್ನು ತಿಳಿಸಲಾಗುವುದು ಎಂದು ಶ್ರೀ ಮಠದ ಅಧಿಕಾರಿಗಳು ತಿಳಿಸಿದ್ದಾರೆ.

# 3 ಪಾಸಿಟಿವ್, 4 ಗುಣಮುಖ

ದಾವಣಗೆರೆ, ಅ.6- ತಾಲ್ಲೂಕು ವ್ಯಾಪ್ತಿಯ ಮೂವರಲ್ಲಿ ಕೊರೊನಾ ದೃಢಪಟ್ಟಿದ್ದು, ನಾಲ್ವರು ಗುಣಮುಖರಾದ ಬಗ್ಗೆ ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ. ಜಿಲ್ಲೆಯಲ್ಲಿ 39 ಸಕ್ರಿಯ ಪ್ರಕರಣಗಳಿವೆ.

# ಜಲಾವೃತಗೊಂಡ ರಸ್ತೆ: ಕೊಚ್ಚಿ ಹೋಗುತ್ತಿದ್ದ ಸವಾರನ ರಕ್ಷಣೆ



ದಾವಣಗೆರೆ, ಅ.6- ಭಾರೀ ಮಳೆಯಿಂದಾಗಿ ನಗರದ ಪ್ರಮುಖ ರಸ್ತೆಗಳೆಲ್ಲಾ ಜಲಾವೃತಗೊಂಡಿದ್ದು, ಈರುಳ್ಳಿ ಮಾರುಕಟ್ಟೆ ಬಳಿ ಹೊಳೆಯಂತಹ ಸ್ಥಿತಿ ನಿರ್ಮಾಣವಾಗಿತ್ತು. ಮಳೆ ನೀರು ತುಂಬಿದ್ದರಿಂದ ಇಲ್ಲಿನ ರಸ್ತೆಯಲ್ಲಿ ಆಯ ತಪ್ಪಿ ಬಿದ್ದು ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದ ಬೈಕ್ ಸವಾರನನ್ನು ಸ್ಥಳೀಯರು ರಕ್ಷಿಸಿರುವ ಘಟನೆ ಇಂದು ಬೆಳಗ್ಗೆ ನಡೆದಿದೆ.

ಈರುಳ್ಳಿ ಮಾರುಕಟ್ಟೆ ಬಳಿಯ ಅಂಡರ್ ಪಾಸ್ ನಲ್ಲಿ ಮೊಣಕಾಲುದ್ದ ನೀರು ನಿಂತುಕೊಂಡಿತ್ತು. ಈ ವೇಳೆ ಅದೇ ರಸ್ತೆಯಲ್ಲಿ ದಾಟಲು ಬಂದ ಬೈಕ್ ಸವಾರನೊಬ್ಬ ಆಯ ತಪ್ಪಿ ನೀರಿಗೆ ಬಿದ್ದಿದ್ದು, ನಿಯಂತ್ರಣ ತಪ್ಪಿ ಕೊಚ್ಚಿಕೊಂಡು ಹೋಗುತ್ತಿದ್ದ. ಇದನ್ನು ಗಮನಿಸಿದ ಸ್ಥಳೀಯರು ಕೂಡಲೇ ಆತನನ್ನು ಎಳೆದು ರಕ್ಷಣೆ ಮಾಡಿದ್ದಾರೆ. ಅದೃಷ್ಟವಶಾತ್ ದುರಂತವೊಂದು (2ನೇ ಪುಟಕ್ಕೆ)

# ದುರ್ಗಾ ದೇವಿ ಮೂರ್ತಿಗೆ ಅಲಂಕಾರ



ಇಂದಿನಿಂದ ಆರಂಭಗೊಳ್ಳಲಿರುವ ದಸರಾ ಮಹೋತ್ಸವದ ಅಂಗವಾಗಿ ದಾವಣಗೆರೆ ಕೆಟಿಜೆ ನಗರದ 2ನೇ ಕ್ರಾಸ್‌ನಲ್ಲಿರುವ ಶ್ರೀ ರೇವಣಸಿದ್ದೇಶ್ವರ, ಆಂಜನೇಯ, ಗಣಪತಿ ದೇವಸ್ಥಾನದ ಆವರಣದಲ್ಲಿ ಕಲಾವಿದ ಕಲ್ಯಾಣ್ ದುರ್ಗಾದೇವಿ ಮೂರ್ತಿಯ ಅಲಂಕಾರಕ್ಕೆ ಅಂತಿಮ ಸ್ಪರ್ಶ ನೀಡುತ್ತಿರುವುದು.

# ಪೌರ ಕಾರ್ಮಿಕರ ಸೇವೆ ಅನನ್ಯ: ವೀರೇಶ್

## 'ನೆಮ್ಮದಿ ಚಿಕಿತ್ಸಾ ರಂಗ 2021-22' ಉದ್ಘಾಟಿಸಿದ ಪಾಲಿಕೆ ಮೇಯರ್

ದಾವಣಗೆರೆ,ಅ.6- ಕೋವಿಡ್-19ರ ಸಂಕಷ್ಟದ ಸಂದರ್ಭದಲ್ಲಿ ಪೌರ ಕಾರ್ಮಿಕರು ಆತ್ಮಸ್ಥೈರ್ಯದಿಂದ ಸಮಾಜಕ್ಕೆ ಸಲ್ಲಿಸಿದ ಸೇವೆ ಅನನ್ಯವಾದುದು ಎಂದು ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಪೌರ ಕಾರ್ಮಿಕರ ಸಮಾಜಸೇವಾ ಕಾರ್ಯವನ್ನು ಶ್ಲಾಘಿಸಿದರು.

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ಹಾಗೂ ಮಹಾನಗರ ಪಾಲಿಕೆ ದಾವಣಗೆರೆ ಸಹಯೋಗದಲ್ಲಿ ನಗರದ ಆರ್. ಹೆಚ್. ಮಿನಿ ಛತ್ರದಲ್ಲಿ ಕೊರೊನಾ ಯೋಧರಿಗೆ 'ನೆಮ್ಮದಿ ಚಿಕಿತ್ಸಾ ರಂಗ 2021-22' ಮನೋರಂಜನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೊರೊನಾ ಭೀತಿಯಿಂದ ಬಹುತೇಕ ಜನರು ಮನೆಯೊಳಗೆ ಇದ್ದರು. ಆದರೆ, ಯಾವುದೇ ಜೀವಭಯವಿಲ್ಲದೆ ಆತ್ಮಸ್ಥೈರ್ಯದಿಂದ ನಗರದ ಸ್ವಚ್ಛತೆ, ಜನಾರೋಗ್ಯದ ಜೊತೆ ಜನರ ರಕ್ಷಣೆಗೆ ನಿಂತವರು ಪೌರ ಕಾರ್ಮಿಕರು ಒತ್ತಡದ ನಡುವೆಯೂ ನಿತ್ಯ ಸೇವಾ ಕಾರ್ಯದಲ್ಲಿ ತೊಡಗಿದ್ದು, ಇಡೀ ಸಮಾಜ ನಿಮ್ಮೊಟ್ಟಿಗೆ ಇದೆ.



ನಿಮ್ಮ ಈ ಸೇವಾ ಕಾರ್ಯ ನಿರಂತರವಾಗಿ ಸಾಗಲಿ ಎಂದು ಹಾರೈಸಿದರು.


ಸ್ವತಃ ಪ್ರಧಾನಿ ನರೇಂದ್ರ ಮೋದಿಯವರು ಪೌರ ಕಾರ್ಮಿಕರ ಪಾದಪೂಜೆ ಮಾಡುವ ಮೂಲಕ ಅವರ ಶ್ರೇಷ್ಠ ಕಾರ್ಯಕ್ಕೆ ಅಭಿನಂದಿಸಿದ್ದಾರೆ. ದೇಶದಲ್ಲಿ ಸ್ವಚ್ಛ ಭಾರತ ಕಾರ್ಯಕ್ರಮ ಯಶಸ್ವಿಯಾಗುತ್ತಿರುವುದೇ ನಿಮ್ಮಿಂದ ಎಂದ ವೀರೇಶ್ ಅವರು, ಕಾಯಕದ ಜೊತೆಗೆ ತಮ್ಮ ಹಾಗೂ ಕುಟುಂಬ ಸದಸ್ಯರ ಆರೋಗ್ಯವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಸೇವೆ ಇರಲಿ. ಅವರ ಸಮಸ್ಯೆಗಳು ಏನೇ ಇರಲಿ, ಅವುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಮಾತನಾಡಿ, ಹುಟ್ಟಿದಾಗ ನೀಡುವ ಜನನ ಪ್ರಮಾಣ ಪತ್ರದಿಂದ ಹಿಡಿದು ಸತ್ತಾಗ ನೀಡುವ ಮರಣ ಪ್ರಮಾಣ ಪತ್ರ ವಿತರಣೆ, ನಗರ ಸ್ವಚ್ಛತೆ, ಜನರ ಆರೋಗ್ಯ, ಪರಿಸರ ಸಂರಕ್ಷಣೆ ಸೇರಿದಂತೆ ಇಡೀ ನಗರಾಭಿವೃದ್ಧಿಗಾಗಿ ಪಾಲಿಕೆ ಆಡಳಿತ ಕಾರ್ಯೋನ್ಮುಖವಾಗಿದೆ ಎಂದರು.

ಪಾಲಿಕೆ (3ನೇ ಪುಟಕ್ಕೆ)

# ನಗರದಲ್ಲಿ ಇಂದಿನಿಂದ ವಿಜಯದಶಮಿ

## 15ಕ್ಕೆ ಬೃಹತ್ ಶೋಭಾಯಾತ್ರೆ, ಸಂಜೆ ಅಂಬುಛೇದನ



ದಾವಣಗೆರೆ, ಅ. 6- ವಿಶ್ವ ಹಿಂದೂ ಪರಿಷದ್ ಹಾಗೂ ಸಾರ್ವಜನಿಕ ವಿಜಯ ದಶಮಿ ಮಹೋತ್ಸವ ಸಮಿತಿ ಆಶ್ರಯದಲ್ಲಿ ಇಂದಿನಿಂದ ಅ.15ರವರೆಗೆ ಸಾರ್ವಜನಿಕ ವಿಜಯ ದಶಮಿ ಮಹೋತ್ಸವವನ್ನು ಆಚರಿಸಲಾಗುವುದು ಎಂದು ಸಾರ್ವಜನಿಕ ವಿಜಯ ದಶಮಿ ಮಹೋತ್ಸವ ಸಮಿತಿ ಸಂಚಾಲಕ ಸತೀಶ್ ಪೂಜಾರಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಇಂದು ಬೆಳಿಗ್ಗೆ 10 ಗಂಟೆಗೆ ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಸ್ಥಾನದಿಂದ ಪೂರ್ಣಕುಂಭದೊಂದಿಗೆ ಶ್ರೀ ದುರ್ಗಾದೇವಿಯ ವಿಗ್ರಹವನ್ನು ಮೆರವಣಿಗೆಯ ಮೂಲಕ ಬೀರಲಿಂಗೇಶ್ವರ (2ನೇ ಪುಟಕ್ಕೆ)


# ಪೆಟ್ರೋಲ್, ಡೀಸೆಲ್ ಜೊತೆಗೆ ಅಡುಗೆ ಅನಿಲದ ಬೆಲೆಯೂ ಏರಿಕೆ

ನವದೆಹಲಿ, ಅ. 6 - ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ದಾಖಲೆ ಮಟ್ಟಕ್ಕೆ ತಲುಪಿರುವುದರ ನಡುವೆಯೇ, ಅಡುಗೆ ಅನಿಲದ ಸಿಲಿಂಡರ್ ಬೆಲೆಯನ್ನು 15 ರೂ. ಹೆಚ್ಚಿಸಲಾಗಿದೆ.

ಸಬ್ಸಿಡಿ ಹಾಗೂ ಸಬ್ಸಿಡಿಯೇತರ ಅಡುಗೆ ಅನಿಲದ ಸಿಲಿಂಡರ್‌ಗಳೆರಡರ ಬೆಲೆಯನ್ನೂ ಹೆಚ್ಚಿಸಲಾಗಿದೆ. ಜುಲೈ ನಂತರ ಅಡುಗೆ ಅನಿಲ ಸಿಲಿಂಡರ್ ಬೆಲೆ 90 ರೂ. ಹೆಚ್ಚಾಗಿದೆ. ಜುಲೈ ನಂತರ ನಾಲ್ಕು (3ನೇ ಪುಟಕ್ಕೆ)

**ಸಿಲಿಂಡರ್ ದರ 15 ರೂ. ಹೆಚ್ಚಳ, ಜುಲೈ ನಂತರ ಒಟ್ಟು 90 ರೂ. ಏರಿಕೆ**

# ಕುಂದೂರಿನಲ್ಲಿ ಸಿಎಂ ಗ್ರಾಮ ವಾಸ್ತವ್ಯ : ಜಿಲ್ಲಾಡಳಿತದಿಂದ ಸಿದ್ಧತೆ



ಹೊನ್ನಾಳಿ, ಅ.6- 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಹೆಸರಿನಡಿ ಇದೇ ದಿನಾಂಕ 16ರಂದು ತಾಲ್ಲೂಕಿನ ಕುಂದೂರು ಗ್ರಾಮದಲ್ಲಿ ನಡೆಯಲಿರುವ ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್. ಅಶೋಕ್ ಪಾಲ್ಗೊಳ್ಳಲಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಕುಂದೂರು ಗ್ರಾಮಕ್ಕೆ ಇಂದು ಭೇಟಿ ನೀಡಿ ಪರಿಶೀಲಿಸಿದರು.

ಅವಳಿ ತಾಲ್ಲೂಕುಗಳಲ್ಲಿ ಸುರಿದ ಸತತ ಮಳೆಯಲ್ಲೂ ಛತ್ರಿ ಹಿಡಿದು ಅಧಿಕಾರಿಗಳೊಂದಿಗೆ ದಿನವಿಡೀ ಹೊನ್ನಾಳಿ ಪ್ರವಾಸಿ ಮಂದಿರ, ನ್ಯಾಮತಿಯ ಸುರಹೊನ್ನೆ, ಕುಂದೂರು ಗ್ರಾಮಗಳಿಗೆ ನೀಡಿ ಪರಿಶೀಲಿಸಿದರು.

ಕುಂದೂರು ಕಸ್ತೂರಬಾ ಶಾಲೆಯಲ್ಲಿ ಮುಖ್ಯಮಂತ್ರಿಗಳು ವಾಸ್ತವ್ಯ ಮಾಡಿ ಗ್ರಾಮಸ್ಥರ ಮನೆಯಲ್ಲಿ ತಿಂಡಿ-ಊಟ ಸೇವನೆಯೊಂದಿಗೆ ಬೆಳಗ್ಗೆ ಆರ್‌ಆರ್ ಕೇರಿಗೆ ಭೇಟಿ ನೀಡಿ ಜನತೆಯೊಂದಿಗೆ ಸಂವಾದ ನಡೆಸಲಿದ್ದಾರೆಂದರು. ಇದೇ ರೀತಿ ಮಳೆ ಸುರಿದರೆ (2ನೇ ಪುಟಕ್ಕೆ)

# ಮೋದಿ ಸ್ಮರಣಿಕೆ : ಕ್ರೀಡಾ ಪರಿಕರಗಳಿಗೆ ಹೆಚ್ಚಿನ ಬಿಡ್



ನವದೆಹಲಿ, ಅ. 6 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ದೊರೆತ ಸ್ಮರಣಿಕೆಗಳ ಹರಾಜಿಗೆ ಇನ್ನೊಂದು ದಿನ ಮಾತ್ರ ಉಳಿದಿದ್ದು, ಐತಿಹಾಸಿಕ ವಸ್ತುಗಳು ಹಾಗೂ ಧಾರ್ಮಿಕ ವಸ್ತುಗಳಿಗೆ ಹೆಚ್ಚಿನ ಆಸಕ್ತಿ ದೊರೆತಿದೆ. ಒಲಂಪಿಕ್ ಕ್ರೀಡಾಪಟುಗಳ ಸಲಕರಣೆಗಳಿಗೆ ಅತಿ ಹೆಚ್ಚಿನ ಮೊತ್ತದ ಬಿಡ್ ಮಾಡಲಾಗಿದೆ. (3ನೇ ಪುಟಕ್ಕೆ)

# ರೈಲ್ವೆ ಉದ್ಯೋಗಿಗಳಿಗೆ 78 ದಿನಗಳ ವೇತನದ ಬೋನಸ್



ನವದೆಹಲಿ, ಅ 6 – ರೈಲ್ವೆಯ ಗೆಜೆಟೇತರ ಉದ್ಯೋಗಿಗಳಿಗೆ ಕೇಂದ್ರ ಸರ್ಕಾರ 78 ದಿನಗಳ ವೇತನದ ಉತ್ಪಾದನಾ ಆಧರಿತ ಬೋನಸ್ ಪ್ರಕಟಿಸಿದೆ. 2020-21ನೇ ಸಾಲಿನ ಬೋನಸ್ (2ನೇ ಪುಟಕ್ಕೆ)




**ತಕ್ಷಣ ಬೇಕಾಗಿದ್ದಾರೆ**
ನಿರ್ವಿನ್ಸ್ ಕೆಫೆಯಲ್ಲಿ Coffee ಮತ್ತು Serve ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. (Age 20 to 30) (ಹೋಟೆಲ್‌ನಲ್ಲಿ ಕೆಲಸ ಮಾಡಿದವರಿಗೆ ಆದ್ಯತೆ) ಕೂಡಲೇ ಸಂಪರ್ಕಿಸಿ : Anjaneya Badavane, Davangere
Ph. : 93804 69079

**ಬಿಲ್ಡಿಂಗ್ ಮಾರಾಟಕ್ಕಿದೆ**
ದಾವಣಗೆರೆ ಸಿಟಿ 8ನೇ ವಾರ್ಡ್ ಲೆನಿನ್ ನಗರದಲ್ಲಿ # 2345/50 48+46/ 2x30 ಅಳತೆಯ ಆರ್.ಸಿ.ಸಿ ರೂಫಿಂಗ್ ಬಿಲ್ಡಿಂಗ್ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
94486 65631

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಶಿವ ಪಾರ್ವತಿ ಲೇಔಟ್ ಪಕ್ಕದ ಬನಶಂಕರಿ ಬಡಾವಣೆಯಲ್ಲಿ 30×50 ಉತ್ತರ ಅಕ್ಕ- ಪಕ್ಕ, 30×50 ಪಶ್ಚಿಮ ಅಕ್ಕ- ಪಕ್ಕ.
**ಸ್ವಾಮಿ ಏಜೆಂಟ್,** ವಿದ್ಯಾನಗರ
97421 44715

**ವಾಟರ್ ಪ್ರೂಫಿಂಗ್ (ಮನೆಯ ನೀರು ಸೋರುವಿಕೆಗೆ)**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಜಮೀನು ಮಾರಾಟಕ್ಕಿದೆ**
ತೋಳಹುಣಸೆ ಗ್ರಾಮದಲ್ಲಿ ರೇಷ್ಮೆ ಇಲಾಖೆಗೆ ಹೋಗುವ ದಾರಿಯಲ್ಲಿ ಒಂದು ಎಕರೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ
87674 87922

**ಮನೆಗಳು ಬಾಡಿಗೆಗೆ ಇವೆ**
ಸಿಂಗಲ್ ಬೆಡ್‌ರೂಂ, ಡಬಲ್ ಬೆಡ್‌ರೂಂ, ವಿದ್ಯಾನಗರ, ಆಂಜನೇಯ ಬಡಾವಣೆಯಲ್ಲಿ.
(ಕೇವಲ 1/2 % ಕಮೀಷನ್ ಆಧಾರದ ಮೇಲೆ)
**ಸ್ವಾಮಿ ಏಜೆಂಟ್,** ವಿದ್ಯಾನಗರ
97421 44715

**"ಸೂರ್ಯ" ನವೋದಯ ಹಾಸ್ಟೆಲ್ (ಯಶಸ್ವಿ 26ನೇ ವರ್ಷಕ್ಕೆ ಪಾದಾರ್ಪಣೆ)**
ಇದೇ ತಿಂಗಳು ಅಂದರೆ ಅಕ್ಟೋಬರ್ 8 ರಿಂದ ನವೋದಯ ಹಾಸ್ಟೆಲ್ ಆರಂಭವಾಗುತ್ತಿದೆ. ತರಬೇತಿ ನೀಡುವವರು ಶ್ರೀ ಸುರೇಶ್ ಪಿ. ಮುರಗಿ M.Sc., B.Ed, ಹಾಸ್ಟೆಲ್ ವಿಳಾಸ: #844/11 ಹೊಂಗಿರಣ, ಜಯನಗರ 'ಬಿ' ಬ್ಲಾಕ್, ಭಗೀರಥ ಸರ್ಕಲ್ ಹತ್ತಿರ, ಎಸ್.ಎಸ್. ಆಸ್ಪತ್ರೆ ರಸ್ತೆ, ದಾವಣಗೆರೆ.
99028 24909, 98447 48763

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ. ಸಂಬಳ 8,500 ರಿಂದ 9000 + ESI/PF 8 ತಾಸುಗಳ ಕೆಲಸ
ಸಂಪರ್ಕಿಸಿ: SNA ಪ್ಲಾಜಾ, ಪಿ.ಬಿ. ರಸ್ತೆ, ದಾವಣಗೆರೆ.
91130 53483

**ಮನೆ ಬಾಡಿಗೆಗೆ/ಲೀಸ್‌ಗೆ**
ಪಿ.ಜೆ. ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ 1 ಮತ್ತು 2 ಬೆಡ್ ರೂಂ ಗಳ ಮನೆಗಳು ಇವೆ. ವಿಚಾರಿಸಿ
99860 55959

**ಮಾರಾಟಕ್ಕೆ/ಬಾಡಿಗೆಗೆ ಇದೆ**
ಹರಿಹರದ ಹನಗವಾಡಿ ಕೈಗಾರಿಕಾ ಪ್ರದೇಶದ 6500 ಚ. ಅಡಿ ಜಾಗ ಮತ್ತು ಅದಕ್ಕೆ ಒಳಗೊಂಡ ಕಟ್ಟಡವು 15 HP ವಿದ್ಯುತ್ ಸಂಪರ್ಕ ಹೊಂದಿದ್ದು. ಬಾಡಿಗೆಗೆ ಅಥವಾ ಮಾರಾಟಕ್ಕೆ ಲಭ್ಯವಿದೆ. ನಿವೇಶನವು ಶುದ್ಧ ಕ್ರಯ ಪತ್ರವನ್ನು ಪಡೆದಿರುತ್ತದೆ.
99729 84005, 94836 29113

**ಬಾಡಿಗೆಗೆ/ಲೀಸ್‌ಗಿದೆ**
ಎ.ವಿ.ಕೆ ಕಾಲೇಜ್ ರಸ್ತೆಯಲ್ಲಿ 2 ಬೆಡ್‌ರೂಂ, 3 ಬೆಡ್‌ರೂಂ 4 ಬೆಡ್‌ರೂಂ ಉಳ್ಳ ಮನೆಗಳು ಮತ್ತು ಅಫೀಸ್‌ಗಳಿಗೆ ಯೋಗ್ಯವಾದ ಕಟ್ಟಡ ಬಾಡಿಗೆಗೆ/ಲೀಸ್‌ಗೆ ದೊರೆಯುತ್ತದೆ. ಸಂಪರ್ಕಿಸಿ
97422 26556
98441 37228

**ಸುವರ್ಣ ಉದ್ಯೋಗಾವಕಾಶ**
ವಿದ್ಯಾರ್ಹತೆ: Technical & Non Technical ಪದವೀಧರಾಗಿರಬೇಕು, ಕಛೇರಿ ಕೆಲಸಕ್ಕೆ ಯುವತಿಯರು ಬೇಕಾಗಿದ್ದಾರೆ. 8,000- 12,000 ರೂ. ವರೆಗೆ, ವೃತ್ತಿ ಪರತೆ ನೋಡಿ ವೇತನ ಹೆಚ್ಚಿಸಲಾಗುತ್ತದೆ.
ಸ್ಥಳ: ಎಸ್.ಎಸ್.ಹೈಟೆಕ್ ಹಾಸ್ಪಿಟಲ್ ಮೇನ್ ರೋಡ್, ಲಕ್ಷ್ಮೀ ಲೇಔಟ್, ದಾವಣಗೆರೆ.
89514 55892, 99023 42040

**ಮಾರಾಟಕ್ಕಿವೆ**
ಮಂಚಗಳು, ಟಿ.ವಿ ಗಳು ಮಾರಾಟಕ್ಕಿವೆ. ಸಂಪರ್ಕಿಸಿ
94812 47552

**ಜಮೀನು ಕೊಳ್ಳಲು ಮಾರಲು ಸಂಪರ್ಕಿಸಿ**
ಹರಿಹರ- ದಾವಣಗೆರೆ
(Buyers & Selles only )
74112 50447

**ಬೇಕಾಗಿದ್ದಾರೆ**
APE ಆಟೋ, TATA Ace ಆಟೋಗೆ ಡ್ರೈವರ್ ಡೆಲಿವರಿ ಬಾಯ್ ಬೇಕಾಗಿದ್ದಾರೆ.
**ಧನಶ್ರೀ ಮಾರ್ಕೆಟಿಂಗ್**
ಎಪಿಎಂಸಿ 'ಇ' ಬ್ಲಾಕ್, ದಾವಣಗೆರೆ
94838 94420
94484 56993

**ಬಾಡಿಗೆಗೆ ಇವೆ**
Ground Floor ವೆಜ್/ನಾನ್ ವೆಜ್ ಹೋಟೆಲ್‌ಗೆ, 1st ಫ್ಲೋರ್ ಆಫೀಸ್‌ಗೆ ಯೋಗ್ಯವಾದ ಹಾಲ್ ಹಾಗೂ ಬೀಡಿ ಅಂಗಡಿ ಬಾಡಿಗೆಗೆ ಇವೆ. ಪಿಸಾಳೆ ಕಾಂಪೌಂಡ್ ಪಿ.ಬಿ ರಸ್ತೆ, ದಾವಣಗೆರೆ.
97407 40315, 90601 65011

**ಮನೆ ಬಾಡಿಗೆಗೆ/ಲೀಸ್‌ಗಿದೆ**
2 ಬೆಡ್‌ರೂಂ, ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಜ್‌ಗಿದೆ. ಸಂಪರ್ಕಿಸಿ.
93410 12022

**ಮನೆ ಬಾಡಿಗೆಗೆ ಇದೆ**
ಎಂ.ಸಿ.ಸಿ ಬಿ.ಬ್ಲಾಕ್, 2ನೇ ಮೇನ್, 6ನೇ ಕ್ರಾಸ್, #3465/1, ಮೊದಲನೇ ಮಹಡಿಯಲ್ಲಿ 1BHK ಮನೆ ಬಾಡಿಗೆಗೆ ಇದೆ. ಮುನ್ಸಿಪಲ್ ಮತ್ತು ಬೋರ್ ನೀರಿನ ಅನುಕೂಲವಿದೆ.
98440 84832
(ಸಸ್ಯಹಾರಿಗಳಿಗೆ ಮಾತ್ರ)

**SALES & MARKETING**
sales & marketing ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ. ವಯೋಮಿತಿ- 20 ರಿಂದ 30 ವರ್ಷ ಒಳಗೆ
**ಸುವೀ ಇಂಡಸ್ಟ್ರೀಸ್ ಕರೂರು** ಇಂಡಸ್ಟ್ರಿಯಲ್ ಏರಿಯಾ ದಾವಣಗೆರೆ.
ಮೊ.96206 38679

**ತಕ್ಷಣ ಬೇಕಾಗಿದ್ದಾರೆ**
ತಕ್ಷಣ ಯುವಕರು- ಯುವತಿಯರು ಬೇಕಾಗಿದ್ದಾರೆ. Tele Marketing ಯುವತಿಯರಿಗೆ 7,000 ರೂ., Field Work ಯುವಕರಿಗೆ 12,000 ರೂ. ಬೈಕ್ ಇದ್ದವರಿಗೆ ಆದ್ಯತೆ.
**ಎಸ್.ಎನ್. ಎಂಟರ್ ಪ್ರೈಸಸ್.**
91487 34420, 85489 01454, 78992 96668

**WANT TO EARN EXTRA INCOME..?**
Part time / full time
Call Now
96635 88115

**ವಾಹನ ಮಾರಾಟಕ್ಕಿದೆ**
ಉತ್ತಮ ಸ್ಥಿತಿಯಲ್ಲಿರುವ 2012 Model Force Kargo King ವಾಹನ ಮಾರಾಟಕ್ಕಿದೆ. ಕೆ.ಬಿ.ಆರ್ ಇಂಡಸ್ಟ್ರೀಸ್, ಟಿ.ಸಿ ಲೇಔಟ್, ಆರ್.ಎಂ.ಸಿ ಲಿಂಕ್ ರೋಡ್, ದಾವಣಗೆರೆ-577001
Ph. 6362147549

**ಕೆಲಸಕ್ಕೆ ಬೇಕಾಗಿದ್ದಾರೆ**
ಮ್ಯಾನುಯಲ್ ಬಿಲ್ ಬರೆಯಲು ಮತ್ತು ಸಾಮಾನು ಕೊಡಲು ಹುಡುಗರು ಬೇಕಾಗಿದ್ದಾರೆ.
**ಹರ್ಷ ಹಾರ್ಡ್ ವೇರ್ & ಪೈಂಟ್ಸ್,** ಸುಭಾಷ್ ರಸ್ತೆ, ಅಶೋಕ ಚಿತ್ರ ಮಂದಿರ ಎದುರು, ರೈಲ್ವೆ ಗೇಟ್ ಹತ್ತಿರ ದಾವಣಗೆರೆ-577001

**ಮನೆ ಬಾಡಿಗೆಗೆ ಇದೆ**
# 2285/30, E/1, LIG ಕ್ವಾಟ್ರರ್ಸ್ ವಿದ್ಯಾನಗರ ಪಾರ್ಕ್ ಹತ್ತಿರ, ಮೊದಲನೇ ಮಹಡಿಯಲ್ಲಿ ಪೂರ್ವ ದಿಕ್ಕಿನ 2BHK ಮನೆ ಹಾಗೂ ಸಿಂಗಲ್ ರೂಂ ಬಾಡಿಗೆಗಿದೆ. ವಿದ್ಯಾರ್ಥಿಗಳಿಗೆ/ನೌಕರರಿಗೆ ಮಾತ್ರ.
94480 47581
(ಸಸ್ಯಹಾರಿಗಳಿಗೆ ಮಾತ್ರ)

**INFINITY TUTORIAL**
Tuitions: 1st to 10th std.
Spoken English (No age limit) Home Tuitions Available.
(Teachers Wanted)
97428 29076, 93803 89236

**LAND FOR SALE**
Bangalore Road next to Honnur right side Bullapura Village, Mayakonda Police stn. board right 1 km Mayakonda border, kurki road 6 acre land for sale.
Honnurswamy Vanjre
87926 04196

**ಮಾರಾಟಕ್ಕಿದೆ**
4 ಎಕರೆ ಜಮೀನು NH4 ರಸ್ತೆಗೆ ಹರಿಹರ ಹತ್ತಿರ ಮಾರಾಟಕ್ಕಿದೆ
(Contact Buyers only)
74112 50447

**ಬೇಕಾಗಿದ್ದಾರೆ**
SSLC/PUC ಆದ ಮಹಿಳೆಯರು ಬಿಲ್ಲಿಂಗ್ ಕ್ಲರ್ಕ್ ಮತ್ತು ಪ್ಯಾಕ್ ಮಾಡಲು ಹಾಗೂ ಡೆಲಿವರಿ ಬಾಯ್ಸ್, ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ. ಭೇಟಿಯ ಸಮಯ: ಸಂಜೆ 6.30ರ ನಂತರ
**ಶ್ರೀ ಗುರು ಎಂಟರ್ ಪ್ರೈಸಸ್**
#579, 6ನೇ ಮುಖ್ಯ ರಸ್ತೆ ಪಿ.ಜೆ ಬಡಾವಣೆ, ದಾವಣಗೆರೆ.

**ಪಿತ್ರಾರ್ಜಿತ/ಕುಟುಂಬದ ಆಸ್ತಿ**
ನಿಮ್ಮ ಕುಟುಂಬದ ಪೂರ್ವಜರ ಮತ್ತು ಒಟ್ಟು ಕುಟುಂಬದ ಆಸ್ತಿಗಳಿಂದ ನಿಮಗೆ ಬರಬೇಕಾಗಿರತಕ್ಕ ಪಾಲಿನ ಭಾಗ ಪಡೆಯಲು ಸಂಪರ್ಕಿಸಿ:
**ಹೊನ್ನೂರಸ್ವಾಮಿ ವಾಂಜ್ರೆ**
87926 04196

**2BHK ಮನೆಗಳು ಬಾಡಿಗೆಗೆ/ಲೀಜ್‌ಗೆ ಇವೆ**
ಕುಂದುವಾಡದ ಕೆರೆ, ಮಹಾಲಕ್ಷ್ಮಿ ಬಡಾವಣೆಯಲ್ಲಿ ಕಾವೇರಿ ಅಪಾರ್ಟ್ ಮೆಂಟ್ ಹಿಂಭಾಗದಲ್ಲಿ ಹೊಸದಾಗಿ ನಿರ್ಮಿಸಿರುವ ಎಲ್ಲಾ ಆಧುನಿಕ ಸೌಲಭ್ಯಗಳಿರುವ 2BHK ಮನೆಗಳು ರಿಯಾಯಿತಿ ದರದಲ್ಲಿ ಬಾಡಿಗೆಗೆ /ಲೀಜ್‌ಗೆ ಇವೆ.
73380 43912, 63663 27368

**WANTED FEMALE**
Data Entry-1, Office Work- 1, Computer faculty-2, 6,000+ salary, Incentive (1 year Computer Course).
95910 78215
97392 30843

**ಉಚಿತ ಭವಿಷ್ಯ ಖಚಿತ ಪರಿಹಾರ ನಂ. 1 ವಶೀಕರಣ ಸ್ಪೆಷಲಿಸ್ಟ್**
ನೀವು ಇಷ್ಟಪಟ್ಟವರು, ನಿಮ್ಮಂತಾಗಲು, ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಅತ್ತೆ, ಸೊಸೆ ಕಿರಿಕಿರಿ. 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
96068 18273

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಪ್ರಾಂಸರಿ ನೋಟಿನ ಬಗ್ಗೆ**
ಪ್ರಾಂಸರಿ ನೋಟು ಬರೆದುಕೊಟ್ಟು ನಿಮ್ಮಿಂದ ಸಾಲ ಪಡೆದ ಬಾಬ್ತು ಹಾಗೇ ಬಾಕಿ ಉಳಿಯುತ್ತಾ ಬಂದಿರುವ ಹಣಕ್ಕೆ ಬಡ್ಡಿ ಸಮೇತ ಮರಳಿ ಪಡೆಯಲು ಸಂಪರ್ಕಿಸಿ:
**ಹೊನ್ನೂರಸ್ವಾಮಿ ವಾಂಜ್ರೆ**
87926 04196

**ಹೆಚ್ಚಿನ ಹಣ ಸಂಪಾದನೆ ಮಾಡಬೇಕೆ?**
ದಿನದಲ್ಲಿ 1-4 ಘಂಟೆ ಕೆಲಸ ಪಾರ್ಟ್ ಟೈಮ್/ಫುಲ್ ಟೈಮ್. ಕರೆ ಮಾಡಿ
96635 88115


**ಗುರುಮೂರ್ತಿ ನಿಧನ**



ದಾವಣಗೆರೆ ಎಸ್.ಎಸ್. ಬಡಾವಣೆ 'ಎ' ಬ್ಲಾಕ್, 9ನೇ ಕ್ರಾಸ್ ವಾಸಿ ಮಲ್ಲಿಕಾರ್ಜುನಪ್ಪ ಬಿದಿರಿಕುಂದಿ ಅವರ ಅಳಿಯ

**ಶ್ರೀ ಗುರುಮೂರ್ತಿ**

ಅವರು ದಿನಾಂಕ 06.10.20201ರ ಬುಧವಾರ ಮಧ್ಯಾಹ್ನ 12 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 53 ವರ್ಷ ವಯಸ್ಸಾಗಿತ್ತು. ಪತ್ನಿ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ 07.10.2021 ಬೆಳಿಗ್ಗೆ 10.30ರವರೆಗೆ ಸ್ವಗೃಹದಲ್ಲಿ ಇಡಲಾಗುವುದು. ನಂತರ ಚನ್ನಗಿರಿ ತಾಲ್ಲೂಕು ಕಾರಿಗನೂರಿನ ಮೃತರ ಜಮೀನಿನಲ್ಲಿ ಮಧ್ಯಾಹ್ನ 12.30ಕ್ಕೆ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

**ಶ್ರೀ ಗುರುಮೂರ್ತಿ ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ**
**ಪ್ರಶಾಂತ್ ಬಿರದಾರ್, ಶ್ರೀ ಅಮರೇಶ್ವರ ಪ್ರಾವಿಜನ್ ಸ್ಟೋರ್**
10ನೇ ಮೇನ್, 4ನೇ ಕ್ರಾಸ್ ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ. ಮೊ : 97399 48413


**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿನಾಂಕ 07.10.2021ರ ಗುರುವಾರ ಮತ್ತು ನಾಳೆ 08.10.2021ರ ಶುಕ್ರವಾರದಂದು ಮಾತ್ರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
**ಅನುಗ್ರಹ ಆಸ್ಪತ್ರೆ**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana Collage Road, Vidyanagara, 2nd main, Davangere
77603 16576
90080 55813


**ಮೂರನೇ ವರ್ಷದ ಪುಣ್ಯ ಸ್ಮರಣೆ**



**ದಿ|| ಯು.ಜಿ. ಸಿದ್ದಪ್ಪನವರು**
M.Sc, ಪ್ರಾಂಶುಪಾಲರು
ಜನನ : 27.01.1949,
ಮರಣ : 05.10.2018

-: ಸಂಸ್ಥಾಪಕರು : -
**ಶ್ರೀ ಸಿದ್ದೇಶ್ವರ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜ್**
ಆಂಜನೇಯ ಬಡಾವಣೆ, ದಾವಣಗೆರೆ.

**ಸದಾ ನಿಮ್ಮ ನೆನಪಿನಲ್ಲಿರುವ**

ಶ್ರೀಮತಿ ಶಾರದಮ್ಮ ಮತ್ತು ಶ್ರೀ ಯು.ಜಿ. ಚಂದ್ರಪ್ಪ, ಕುರುಡಿ
ಶ್ರೀಮತಿ ನಾಗರತ್ನಮ್ಮ ಮತ್ತು ಶ್ರೀ ಯು.ಜಿ. ಶಿವಾನಂದಪ್ಪ, ವಕೀಲರು
ಶ್ರೀಮತಿ ದೇವಿಕಾ ಮತ್ತು ಶ್ರೀ ಯು.ಜಿ. ಶಾಂತಪ್ಪ, ಎಂಜಿನಿಯರ್
ಶ್ರೀಮತಿ ಅನುಸೂಯ ಮತ್ತು ಶ್ರೀ ಯು.ಜಿ. ನಾಗರಾಜಪ್ಪ, ಕುರುಡಿ
ಶ್ರೀಮತಿ ಮಂಜುಳ ಮತ್ತು ಶ್ರೀ ಯು.ಜಿ. ಶರಣಪ್ಪ, ಪ್ರಾಂಶುಪಾಲರು, ಹರಪನಹಳ್ಳಿ ಮತ್ತು ಮಕ್ಕಳು.
ಉಜ್ಜನಿ ಗೌಡ್ರು ವಂಶಸ್ಥರು, ಕುರುಡಿ ಗ್ರಾಮ, ದಾವಣಗೆರೆ ತಾಲ್ಲೂಕು


**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ನೇರ ಪರೀಕ್ಷೆಗಳು**
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
**ಮಾನಸ ಎಜುಕೇಷನ್ ಟ್ರಸ್ಟ್(ರಿ.)**
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**HOUSE FOR RENT**
MCC `B' block, 2nd main, 6th cross, #3465/1, 1st floor, 1 BHK house, municipal/ borewell water facility (only for vegetarian)
98440 84832

**WANTED**
Require a femal candidate for data entry work with the basic knowledge of Tally and Excel.
NEEMS DISTRIBUTOR
# 574/1 6th main Road P.J. Extension, Davangere.

**ಪ್ರವೇಶ ಪ್ರಕಟಣೆ**
**ಕರೆಸ್ಪಾಂಡೆನ್ಸ್/ ರೆಗ್ಯುಲರ್**
SSLC, PUC, BA, B.Com, B.Sc, MA, M.Com, MSc, MBA, All PG & Diploma Courses
S.S. Global Institute for Higher Education, Davanagere.
72593 59861, 99863 45266


# ಕಾನೂನು ಕಾರ್ಯಾಗಾರಗಳು ವಕೀಲ ವೃತ್ತಿಗೆ ಅಗತ್ಯ



**ಜಗಳೂರಿನಲ್ಲಿ ನ್ಯಾ|| ಜಿ.ತಿಮ್ಮಯ್ಯ ಅಭಿಮತ**

ಜಗಳೂರು, ಸೆ.6- ಹಿರಿಯ ಸಂಪನ್ಮೂಲ ವಕೀಲರುಗಳಿಂದ ಕಾರ್ಯಾಗಾರಗಳಲ್ಲಿ ಲಭ್ಯವಾಗುವ ಕಾನೂನಾತ್ಮಕ ಸಲಹೆಗಳು ನ್ಯಾಯಾಂಗ ಸೇವೆಯಲ್ಲಿ ಉತ್ಸಾಹ ಮೂಡಿಸುತ್ತವೆ ಎಂದು ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಜಿ.ತಿಮ್ಮಯ್ಯ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಕೋರ್ಟ್ ಆವರಣದ ವಕೀಲರ ಸಂಘದ ಸಭಾಂಗಣದಲ್ಲಿ ಕ್ರಿಮಿನಲ್ ಕಾನೂನು ಸಂಬಂಧಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಾನೂನು ಕುರಿತ ಉಪನ್ಯಾಸ ಕಾರ್ಯಾಗಾರ ಗಳು ವಕೀಲ ವೃತ್ತಿಯ ಭವಿಷ್ಯಕ್ಕೆ ಪ್ರೇರಣೆಯಾಗಲಿವೆ.

ಕಾನೂನು ಪದವಿ ವಿದ್ಯಾಭ್ಯಾಸದ ಹಂತದಲ್ಲಿ ಖ್ಯಾತ ವಕೀಲರುಗಳ ವ್ಯಕ್ತಿತ್ವದ ಮೌಲ್ಯಯುತ ಉಪನ್ಯಾಸ ಮಾಲಿಕೆಗಳು ನನ್ನನ್ನು ನ್ಯಾಯಾಧೀಶ ಹುದ್ದೆ ಅಲಂಕರಿಸಲು ಕಿಚ್ಚು ಹಚ್ಚಿದವು ಎಂದು ಸ್ಮರಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಮಾತನಾಡಿ, ಕೊಲೆ ಅಥವಾ ಅತ್ಯಾಚಾರ, ಕಳ್ಳತನದಂತಹ ಹಲವಾರು ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಿದ ನಂತರ ಚಾರ್ಜ್‌ಶೀಟ್ ತಯಾರಿಕೆಯಿಂದ ಕನ್ವಿಕ್ಷನ್ ಹಂತಗಳವರೆಗೆ ಸಾಕ್ಷ್ಯಾಧಾರಗಳ ಸಂಗ್ರಹಣೆ ಅತಿಮುಖ್ಯ ಎಂದು ತಿಳಿಸಿದರು.

ಪ್ರಕರಣ ದಾಖಲಾಗಿ ಪತ್ತೆ ಹಚ್ಚುವಾಗ ಇರುವ ಆಸಕ್ತಿಯನ್ನು ನಂತರ ಕೆಲಸದ ಒತ್ತಡಗಳಲ್ಲಿ ನಿರ್ಲಕ್ಷ್ಯ ವಹಿಸದೆ, ಎಲ್ಲಾ ಮಾಹಿತಿ, ಸಾಕ್ಷಿಗಳ ಸಂಗ್ರಹಣೆ ಮಾಡಿದಲ್ಲಿ ಕಾನೂನಿನಡಿ ನ್ಯಾಯಬದ್ಧ ತೀರ್ಪು ಕೊಡಿಸಲು ಸಾಧ್ಯ ಎಂದರು.

ಮಾನವ ಹಕ್ಕುಗಳ ಆಯೋಗದ ಸದಸ್ಯ ಎಲ್.ಎಚ್.ಅರುಣಕುಮಾರ್ ಮಾತನಾಡಿ, ಕಾನೂನು ಅರಿವು - ನೆರವು ಕಾರ್ಯಾಗಾರ ದಂತಹ ಕಾನೂನು ಸೇವಾ ಕಾರ್ಯಕ್ರಮಗಳ ಆಯೋಜನೆಗೆ ರಾಷ್ಟ್ರೀಯ ಮತ್ತು ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳಲ್ಲಿನ ಅನುದಾನವನ್ನು ಹೆಚ್ಚಿನದಾಗಿ ಜಿಲ್ಲಾ ಹಂತಗಳಿಗೂ ವಿಸ್ತರಿಸಲು ಒತ್ತಡ ತರಬೇಕಿದೆ. ಅಖಿಲ ಭಾರತ ವಕೀಲರ ಸಂಘದ ನೇತೃತ್ವದಲ್ಲಿ ಎಪಿಪಿ ಮತ್ತು ನ್ಯಾಯಾಧೀಶರ ಸ್ಪರ್ಧಾತ್ಮಕ ಪರೀಕ್ಷಾ ಆಕಾಂಕ್ಷಿಗಳಿಗೆ ಆನ್‌ಲೈನ್ ಮುಖಾಂತರ ತರಬೇತಿ ನೀಡಲಾಗಿದೆ ಎಂದರು.

ವೇಳೆ ಎಐಎಲ್‌ಯು ರಾಜ್ಯ ಸಮಿತಿ ಸದಸ್ಯ ಹಾಗೂ ಹಿರಿಯ ವಕೀಲ ಶಂಕ್ರಪ್ಪ ಅವರು ಕಾರ್ಯಾಗಾರದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಈ ಸಮಾರಂಭದಲ್ಲಿ ಎಎಸ್‌ಪಿ ಕನ್ನಿಕಾ, ಸರ್ಕಾರಿ ಸಹಾಯಕ ಅಭಿಯೋಜಕರಾದ ಡಿ.ರೂಪ, ಸಿಪಿಐ ಮಂಜುನಾಥ್ ಪಂಡಿತ್, ಪಿಎಸ್‌ಐ ಸಂತೋಷ್ ಭಾಗೋಜಿ, ವಕೀಲರ ಸಂಘದ ಪದಾಧಿಕಾರಿಗಳಾದ, ಕೆ.ಎಲ್. ಪರಮೇಶ್ವರಪ್ಪ, ಶಿವಲಿಂಗಪ್ಪ, ವೈ. ಹನುಮಂತಪ್ಪ, ರುದ್ರೇಶ್, ತಿಪ್ಪೇಸ್ವಾಮಿ, ಆರ್.ಓಬಳೇಶ್, ಡಿ.ಶ್ರೀನಿವಾಸ್, ಕರಿಬಸಪ್ಪ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಹಾಗೂ ವಕೀಲರುಗಳು ಭಾಗವಹಿಸಿದ್ದರು.

## ನಗರದಲ್ಲಿ ವಿಜಯದಶಮಿ

**(1ನೇ ಪುಟದಿಂದ)** ಮೈದಾನಕ್ಕೆ ತರಲಾಗುವುದು.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿಯವರ ಅಮೃತ ಹಸ್ತದಿಂದ ಬೀರಲಿಂಗೇಶ್ವರ ಮೈದಾನದಲ್ಲಿ ಶ್ರೀ ದುರ್ಗಾದೇವಿಯ ಘಟ ಸ್ಥಾಪನೆಯನ್ನು ನೆರವೇರಿಸಲಾಗುವುದು.

ನಾಳೆ ದಿನಾಂಕ 7ರ ಗುರುವಾರದಿಂದ 9 ದಿನಗಳ ಕಾಲ ಪ್ರತಿದಿನ ಶಾಸ್ತ್ರೋಕ್ತ ಪೂಜಾ ಕಾರ್ಯ ಕ್ರಮ ಹಾಗೂ ಪ್ರತಿ ದಿನ ಸಂಜೆ 5.30 ರಿಂದ ಲಲಿತಾ ಸಹಸ್ರನಾಮ ಪಠಣ ನಡೆಯಲಿದೆ.

ಅ.10ರಂದು ಮಹಿಳಾ ಬ್ಯಾಕ್ ರ್‍ಯಾಲಿ ಬೆಳಿಗ್ಗೆ 10.30 ರಿಂದ ರಾಮ್ ಅಂಡ್ ಕೋ ವೃತ್ತದಿಂದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದೆ. 11 ರಂದು ಆಟೋ ರ್‍ಯಾಲಿ ಬೆಳಿಗ್ಗೆ 10.30 ರಿಂದ ನಗರದ ಹೈಸ್ಕೂಲ್ ಮೈದಾನದಿಂದ ಪ್ರಮುಖ ಬೀದಿಗಳಲ್ಲಿ, 13 ರಂದು ಯುವಕರ ಬೈಕ್ ಜಾಥಾ ರಾಮ್ ಅಂಡ್ ಕೋ ವೃತ್ತದಿಂದ ಹಾಗೂ 14 ರಂದು ದುರ್ಗಾ ದೌಡ್ ಬೆಳಿಗ್ಗೆ 10 ರಿಂದ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಿಂದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ ಎಂದು ಮಾಹಿತಿ ನೀಡಿದರು.

15ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ವೆಂಕಟೇಶ್ವರ ವೃತ್ತದಿಂದ ಬೃಹತ್ ಶೋಭಾಯಾತ್ರೆ ನಡೆಯಲಿದೆ. ಕೋಡಿಯಾಲ ಹೊಸಪೇಟೆಯ ತಪೋಕ್ಷೇತ್ರ ಪುಣ್ಯಕೋಟಿ ಮಠದ ಶ್ರೀ ಬಾಲಯೋಗಿ ಶ್ರೀ ಜಗದೀಶ್ವರ ಮಹಾಸ್ವಾಮಿಗಳು, ಹಿರೇಹಡಗಲಿ ಹಾಲಸ್ವಾಮಿ ಮಠದ ಶ್ರೀ ಅಭಿನವ ಹಾಲಶ್ರೀಗಳು ಹಾಗೂ ವಿನೋಬನಗರ ಶ್ರೀ ಜಡೆಸಿದ್ಧ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಸ್ವಾಮಿಗಳು ಶೋಭಾಯಾತ್ರೆ ಉದ್ಘಾಟಿಸಲಿದ್ದಾರೆ.

ಅಂದು ಸಂಜೆ 6 ಕ್ಕೆ ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಬನ್ನಿ ಮುಡಿಯುವ ಕಾರ್ಯಕ್ರಮ ಹಾಗೂ ಡಿಸಿ ಮಹಾಂತೇಶ ಬೀಳಗಿ ಅವರಿಂದ ಅಂಬುಛೇದನ ನಡೆಯಲಿದೆ. ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮೇಯರ್ ಎಸ್.ಟಿ. ವೀರೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಪ್ರಾಂತ ಸಹಕಾರ ಕಾರ್ಯವಾಹಕರಾದ ಪಟ್ಟಾಭಿರಾಮ್ ಅವರು ಪ್ರಮುಖ ಭಾಷಣಕಾರರಾಗಿಯೂ, ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಎಸ್.ಎ. ರವೀಂದ್ರನಾಥ್, ಡಾ.ಶಾಮನೂರು ಶಿವಶಂಕರಪ್ಪ, ಎಸ್ಪಿ ಸಿ.ಬಿ. ರಿಷ್ಯಂತ್ ಆಗಮಿಸಲಿದ್ದಾರೆ.

ಹಿರಿಯ ಮುಖಂಡರಾದ ಕೆ.ಬಿ. ಶಂಕರ ನಾರಾಯಣ, ವಿನಾಯಕ ರಾನಡೆ, ಭಜರಂಗದಳ ರಾಜು, ರಾಜಶೇಖರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಪೌರ ಕಾರ್ಮಿಕರಿಗೆ ಸೈಕಲ್ ವಿತರಣೆ



**ಹರಿಹರ**

ಹರಿಹರ, ಅ.6- ಪೌರ ಕಾರ್ಮಿಕರಿಗೆ ಸೈಕಲ್ ವಿತರಣೆ ಮಾಡುವುದರಿಂದ ಕಾರ್ಮಿಕರು ಸೂಕ್ತ ಸಮ ಯಕ್ಕೆ ಸ್ವಚ್ಛತೆ ಕೆಲಸಕ್ಕೆ ಆಗಮಿಸಲು ಅನುಕೂಲವಾಗ ಲಿದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ನಗರಸಭೆ ಆವರಣದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀ ಜಯಂತಿ ಅಂಗವಾಗಿ ಪೌರ ಕಾರ್ಮಿಕರಿಗೆ ಸೈಕಲ್ ವಿತರಣೆ ಮಾಡಿ ಅವರು ಮಾತನಾಡಿದರು.

ನಗರಸಭೆ ಅಧ್ಯಕ್ಷೆ ರತ್ನ ಡಿ. ಉಜ್ಜೇಶ್ ಮಾತನಾಡಿ, ಪೌರ ಕಾರ್ಮಿಕರು ಮಾಡುವ ದಿನ ನಿತ್ಯದ ಕಾಯಕವನ್ನು ಮೆಚ್ಚಿ ಸರ್ಕಾರ ಸೈಕಲ್ ವಿತರಣೆ ಮಾಡಿದೆ. ಇದನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳುವಂತೆ ಕರೆ ನೀಡಿದರು.

ಪೌರಾಯುಕ್ತರಾದ ಎಸ್. ಲಕ್ಷ್ಮಿ ಮಾತನಾಡಿ, ನಗರದ ಸ್ವಚ್ಛತೆಯಲ್ಲಿ ಹೆಚ್ಚು ಕಾಳಜಿ ವಹಿಸಿ ತಮ್ಮ ದೈನಂದಿನ ಕೆಲಸಗಳನ್ನು ದಿನನಿತ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಶೇ. 24.10 ರ ಅನುದಾನದಲ್ಲಿ 107 ಜನರಿಗೆ ಸೈಕಲ್ ವಿತರಿಸಲಾಗಿದೆ ಎಂದು ತಿಳಿಸಿದರು. ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಮಂಜೂರಾಗಿ ರುವ 4 ಸ್ವಯಂ ಚಾಲಿತ ವಾಹನ ಗಳಲ್ಲಿ ಎರಡು ವಾಹನಗಳಿಗೆ ಶಾಸಕ ಎಸ್. ರಾಮಪ್ಪ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ಮಂಜುನಾಥ್ ಪಟೇಲ್, ನಗರಸಭೆ ಉಪಾಧ್ಯಕ್ಷ ಎಂ.ಎಸ್. ಬಾಬುಲಾಲ್, ಸದಸ್ಯರುಗಳಾದ ಎಸ್.ಎಂ. ವಸಂತ್, ಕೆ.ಜಿ. ಸಿದ್ದೇಶ್, ಎನ್. ರಜನಿಕಾಂತ್, ಸೈಯದ್, ಅಲ್ತಾಫ್, ನಿಂಬಕ್ಕ ಚಂದಾಪುರ, ಪಕ್ಕೀರಮ್ಮ ನಾಗರತ್ನಮ್ಮ ಲಕ್ಷ್ಮಿ ಮೋಹನ್ ದುರ್ಗೋಜಿ, ನಾಮನಿರ್ದೇಶಿತ ಸದಸ್ಯರಾದ ರಾಘವೇಂದ್ರ, ಕಾರ್ಯ ನಿರ್ವಾಹಕ ಅಭಿಯಂತರ ಎಸ್.ಎಸ್. ಬಿರಾದಾರ್, ಇಂಜಿನಿಯರ್ ಅಬ್ದುಲ್ ಹಮೀದ್, ಲೆಕ್ಕಾಧಿಕಾರಿ ಮಂಜುನಾಥ್, ವಸಂತ್, ಕಿರಣ್ ಕುಮಾರ್, ಜಗದೀಶ್, ಪೌರಸೇವಾ ನೌಕರರ ಸೇವಾ ಸಂಘದ ಅಧ್ಯಕ್ಷ ಸದಾಶಿವ, ಯುವ ಮುಖಂಡ ಮತ್ತು ಉದ್ಯಮಿ ಎನ್.ಎಚ್. ಶ್ರೀನಿವಾಸ್, ಅಂಗಡಿ ಮಂಜುನಾಥ್ ಮತ್ತು ಇತರರು ಹಾಜರಿದ್ದರು.

## ನೊಳಂಬ ವೀರಶೈವ ಪುರೋಹಿತರ ಸಂಘ ಉದ್ಘಾಟನೆ



**ಉಕ್ಕಡಗಾತ್ರಿ**

ಮಲೇಬೆನ್ನೂರು, ಅ.6- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಕಲ್ಯಾಣ ಮಂಟಪದಲ್ಲಿ ಇತ್ತೀಚೆಗೆ ಅಖಿಲ ಕರ್ನಾಟಕ ನೊಳಂಬ ವೀರಶೈವ ಪುರೋಹಿತ ಕ್ಷೇಮಾಭಿವೃದ್ಧಿ ಸಂಘವನ್ನು ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ ಉದ್ಘಾಟಿಸಿದರು.

ಸಂಘದ ಅಧ್ಯಕ್ಷ ಶಿವರುದ್ರಯ್ಯ ಶಾಸ್ತ್ರಿ ಅಧ್ಯಕ್ಷತೆ ವಹಿಸಿದ್ದರು. ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಸ್. ಸುರೇಶ್, ಟ್ರಸ್ಟಿ ಜಿಗಳಿ ಇಂದೂಧರ್ ಸೇರಿದಂತೆ ಎಲ್ಲಾ ಟ್ರಸ್ಟಿಗಳು ಹಾಜರಿದ್ದರು.

**ಸಂಘದ ಪದಾಧಿಕಾರಿಗಳು:** ಅಧ್ಯಕ್ಷರಾಗಿ ತಿಪಟೂರು ತಾಲ್ಲೂಕು ಕೆರೆಕೋಡಿ ರಂಗಾಪುರ ಮಠದ ಎಂ.ಆರ್. ಶಿವರುದ್ರಯ್ಯ ಶಾಸ್ತ್ರಿ, ಉಪಾಧ್ಯಕ್ಷ ಬಿ.ಪಿ. ಸುರೇಶ್ ಶಾಸ್ತ್ರಿ ಬಳ್ಳೆಕಟ್ಟೆ, ಪ್ರಧಾನ ಕಾರ್ಯದರ್ಶಿ ಡಿ.ಎಸ್. ಚಂದ್ರಶೇಖರಯ್ಯ ಶಾಸ್ತ್ರಿ ದೊಂಬರಹಳ್ಳಿ, ಖಜಾಂಚಿ ಸಿದ್ದೇಶ್ ಶಾಸ್ತ್ರಿ, ಗೌರವಾಧ್ಯಕ್ಷರಾಗಿ ತಿಪಟೂರಿನ ಚನ್ನಬಸವಾರಾಧ್ಯ, ಕಮ್ಮನಹಳ್ಳಿಯ ಮಹೇಶ್ವರಯ್ಯ ಶಾಸ್ತ್ರಿ, ಗುಬ್ಬಿಯ ನಂದೀಶಯ್ಯ ಶಾಸ್ತ್ರಿ ಆಯ್ಕೆಯಾದರು.

ನಿರ್ದೇಶಕರಾಗಿ ಅರಸೀಕೆರೆ ಶಿವಪ್ರಸಾದ್, ಹಾನಗಲ್ ಗಂಗಯ್ಯ, ಬಾರಂದೂರಿನ ಈಶ್ವರಯ್ಯ, ಸಣ್ಣ ಸಂಗಾಪುರದ ಚಂದ್ರಯ್ಯ, ವಡೆಯರ ಬಸಾಪುರದ ಶಿವಮೂರ್ತಿ ಶಾಸ್ತ್ರಿ, ದೊಡ್ಡ ಎರೆಹಳ್ಳಿ ಜಗದೀಶಯ್ಯ ಶಾಸ್ತ್ರಿ, ರಾಮೇನಹಳ್ಳಿ ಗುರುಮೂರ್ತಿ ಶಾಸ್ತ್ರಿ ಆಯ್ಕೆಯಾದರು.

## ರೈಲ್ವೆ ಬೋನಸ್

**(1ನೇ ಪುಟದಿಂದ)** ಪ್ರಕಟಿಸಲಾಗಿದ್ದು, ಇದು 11.56 ಲಕ್ಷ ಉದ್ಯೋಗಿಗಳಿಗೆ ನೆರವಾಗಲಿದೆ. ಇದರ ಒಟ್ಟು ವೆಚ್ಚ 1,985 ಕೋಟಿ ರೂ. ಆಗಿದೆ.


**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Pharmacy & BHMS (Government & Private College)
**ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್**
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 94837 64859
87620 58369, 90080 67049

**CAR FOR SALE**
XUV500 W8 Exclusive Limited Edition White colour, 1,45,000 km Driven 2015 Model, Single owner Fully Showroom maintenance.
88844 19930, 88844 19937

**WANTED**
**Ladies for Office work**
Age limit: 22 years, Qul : SSLC
Preferably Davangere old city candidates attractive salary
Contact with Bio-data
**Jain Enterprises**
Chowkipet Chigateri Galli, Back side to old BSC., Opp Axis Bank, Davangere - 01
98445 55551
98445 09222


## ವಿದ್ಯುತ್ ವ್ಯತ್ಯಯ

ಎಸ್.ಎಸ್. ಲೇಔಟ್ 'ಎ' ಬ್ಲಾಕ್, ಲಕ್ಷ್ಮಿ ಫ್ಲೋರ್ ಮಿಲ್, ಕುವೆಂಪು ನಗರ, ಶಾಮನೂರು ರಸ್ತೆ ಸುತ್ತಮುತ್ತ, ಸ್ವಾಮಿ ವಿವೇಕಾನಂದ ಬಡಾವಣೆ, ಎಲ್.ಐ.ಸಿ. ಕಾಲೋನಿ, ಆಂಜನೇಯ ಬಡಾವಣೆ ಸುತ್ತಮುತ್ತ, ಪಿ.ಬಿ. ರಸ್ತೆ, ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ, ಬಿಲಾಲ್ ಕಾಂಪೌಂಡ್ ಸುತ್ತ ಮುತ್ತ, ಕೆಟಿಜೆ ನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವುಂಟಾಗಲಿದೆ.

**ನಕ್ಕಲೆಪಲ್ಯೆ ಶ್ರೀನಿವಾಸ್ ನಿಧನ**



ದಾವಣಗೆರೆ ವಿನೋಬನಗರ 3ನೇ ಮೇನ್, 10ನೇ ಕ್ರಾಸ್ ವಾಸಿ ಸವಿತಾ ಸಮಾಜದ ನಕ್ಕಲೆಪಲ್ಯೆ ಶ್ರೀನಿವಾಸ್ (55) ಇವರು ದಿನಾಂಕ 6.10.2021 ರ ಬುಧವಾರ ಮಧ್ಯಾಹ್ನ 12.50ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 7.10.2021ರ ಗುರುವಾರ ಬೆಳಗ್ಗೆ 11 ಗಂಟೆಗೆ ಗಾಂಧಿನಗರದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಜಲಾವೃತಗೊಂಡ ರಸ್ತೆ : ರಕ್ಷಣೆ

**(1ನೇ ಪುಟದಿಂದ)** ತಪ್ಪಿದಂತಾಗಿದೆ.

ಮಳೆಯಿಂದಾಗಿ ನಗರದ ಗಾಂಧಿ ವೃತ್ತದ ಸಮೀಪದ ಅಶೋಕ ಚಿತ್ರಮಂದಿರ ರಸ್ತೆ, ಗೀತಾಂಜಲಿ ಚಿತ್ರಮಂದಿರ ರಸ್ತೆ ಸೇರಿದಂತೆ ಹಲವೆಡೆ ತಗ್ಗು ಪ್ರದೇಶದ ರಸ್ತೆಗಳು ಜಲಾವೃತವಾಗಿವೆ. ರಸ್ತೆಗಳಲ್ಲಿ ಮೊಣಕಾಲುದ್ದ ನೀರು ನಿಂತಿದ್ದರಿಂದ ವಾಹನಗಳ ಸವಾರರು ಸಂಚಾರಕ್ಕೆ ಪರದಾಟ ನಡೆಸಿದ್ದು, ರಸ್ತೆಗೆ ಇಳಿಯಲು ಆತಂಕ ಪಡುವ ಪರಿಸ್ಥಿತಿ ನಿರ್ಮಾಣವಾಗಿತ್ತು.

## ಕುಂದೂರಿನಲ್ಲಿ ಗ್ರಾಮ ವಾಸ್ತವ್ಯ


**(1ನೇ ಪುಟದಿಂದ)** ಹೇಗೆ ಎಂಬ ಆತಂಕವನ್ನು ಅಧಿಕಾರಿಗಳ ಬಳಿ ಜಿಲ್ಲಾಧಿಕಾರಿಗಳು ಚರ್ಚಿಸಿದರು.

ಕುಂದೂರು ಗ್ರಾಮದ ಹರಿಜನ ಕೇರಿಗೆ ಭೇಟಿ ನೀಡಿದ ಮಹಾಂತೇಶ್ ಬೀಳಗಿ, ಸಂಧ್ಯಾ ಸುರಕ್ಷಾ ವೇತನ ಪಡೆಯದಿರುವವರು, ಪಡಿತರ ಚೀಟಿ ಹೊಂದಿರದಿರುವವರ ಮಾಹಿತಿ ಪಡೆದುಕೊಂಡರು. ಗ್ರಾಮ ವಾಸ್ತವ್ಯ ಕಾರ್ಯಕ್ರಮದ ದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕುಂದೂರು ಗ್ರಾಮದ ಹರಿಜನ ಕೇರಿಗೆ ತೆರಳಿ ಎಲ್ಲರ ಮನೆಗಳಿಗೂ ಭೇಟಿ ನೀಡಲಿದ್ದಾರೆ. ಆ ಹಿನ್ನೆಲೆಯಲ್ಲಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬಳಿಕ, ಗ್ರಾಮ ವಾಸ್ತವ್ಯದಂದು ವೇದಿಕೆ ಕಾರ್ಯಕ್ರಮ ಆಯೋಜಿಸಲು ಕುಂದೂರು ಗ್ರಾಮದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲಾ ಮೈದಾನವನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಅಲ್ಲಿಗೆ ತೆರಳಿ ಪರಿಶೀಲಿಸಿದರು. ಕುಂದೂರು ಗ್ರಾಮದ ಬಿಸಿಎಂ ಹಾಸ್ಟೆಲ್-ಕಸ್ತೂರ ಬಾ ಹಾಸ್ಟೆಲ್ ಕಟ್ಟಡ ಸಂಕೀರ್ಣದಲ್ಲಿ ಅಧಿಕಾರಿಗಳ ರಾತ್ರಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿಕೊಳ್ಳುವಂತೆ ಸೂಚಿಸಿದರು.

ಹೊನ್ನಾಳಿ ತಹಶೀಲ್ದಾರ್ ಬಸವನಗೌಡ ಕೋಟೂರ, ತಾ.ಪಂ. ಇಓ ರಾಮಾ ಭೋಬಿ, ಉಪ ತಹಶೀಲ್ದಾರ್ ಮಂಜುನಾಥ್ ಕೆ. ಇಂಗಳಗುಂದಿ, ರಾಜಸ್ವ ನಿರೀಕ್ಷಕ ಬಿ.ಎಂ. ರಮೇಶ್, ಕುಂದೂರು ಗ್ರಾ.ಪಂ. ಅಧ್ಯಕ್ಷ ಚಿದಾನಂದಮೂರ್ತಿ, ಸಾಸ್ವೆಹಳ್ಳಿ ಕಿಸಾನ್ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಆಂಜನೇಯ, ಗ್ರಾಮದ ಪ್ರಮುಖರಾದ ಹಾಲೇಶಪ್ಪ, ಅಜ್ಜಪ್ಪ ಹೊದಿಗೆರೆ, ಗುರುರಾಜ್, ಶಿವಕುಮಾರ್, ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

## ನವರಾತ್ರಿ



ನವರಾತ್ರಿ ಬಂದಿದೆ
ನವರಾತ್ರಿ ಬಂದಿದೆ
ನವನವ ಉಲ್ಲಾಸಗಳ
ಹೊತ್ತು ತಂದಿದೆ
ನವದಿನದ ಸಂಭ್ರಮದ ಪರ್ವ ಬಂದಿದೆ
ನವದುರ್ಗೆ ಪೂಜೆಗೆ ಸಜ್ಜಾಗು ಎಂದಿದೆ

ಚಂಡ ಮುಂಡ ನಿಶುಂಭರ ಖಂಡನಮಾಡಿದ
ರುಂಡಮಾಲೆ ಧರಿಸಿದ ಮಹಾ ಕಾಳಿಯು
ಭಂಡಾಸುರನ ಕೊಂದ ಲಲಿತೆ ತ್ರಿಪುರಸುಂದರಿ
ಪಂಚಮಿ ದಿನ ಬರುವಳು ಅರುಣವರ್ಣದಿ

ಸಪ್ತಮಿ ದಿನ ಸರಸ್ವತಿಯಾಗಿ ಬರುವಳು
ಆಪ್ತಳಾಗಿ ವಿದ್ಯೆ ಬುದ್ಧಿ ಕೊಟ್ಟು ಕಾಯ್ವಳು
ಒಪ್ಪುವ ದುರ್ಗಾ ದೇವಿ ಅಷ್ಟಮಿ ದಿನ ಬರುವಳು
ಅಪರೂಪದ ಕೌಮಾರಿ ರೂಪದಿ
ಪೂಜೆಗೊಳ್ಳುವಳು

ಪ್ರತಿ ವಸ್ತುಲು ಪರಾಶಕ್ತಿ ಮಾರನವಮಿಯು
ಕತ್ತಿ, ಕತ್ರಿ, ಪುಸ್ತಕ ಪೆನ್ನು ಪೂಜೆಗೊಳ್ಳುವವು
ಸ್ತುತಿಸಿ ಪೂಜೆ ಮಾಡುವವರ ಸಲಹುವಳಿವಳು
ಸತ್ವಭರಿತ ಆದಿಶಕ್ತಿ ಎಲ್ಲೆಲ್ಲೂ ವ್ಯಾಪ್ತಳು

ವಿಜಯದಶಮಿ ವಿಜಯಲಕ್ಷ್ಮಿ ಆಗಿ ಬರುವಳು
ನಿಜ ಭಕ್ತರಿಗೆಲ್ಲ ಅಭಯ ವಿಜಯ ಕೊಡುವಳು
ವಿಜಯೋತ್ಸವ ಚಾಮುಂಡಿಯ ಮೆರವಣಿಗೆಯು
ವಿಜಯದಾಯಕ ಸಿರಿಹರಿಗೆ ನಿಜಸೋದರಿಯು

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

# ನಗರದ ವಿವಿಧ ದೇವಸ್ಥಾನಗಳಲ್ಲಿ ಇಂದಿನಿಂದ ನವರಾತ್ರಿ ಉತ್ಸವ

**ದುಗ್ಗಮ್ಮನ ದೇವಸ್ಥಾನ :** ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 16ರವರೆಗೆ ನವರಾತ್ರಿ ಮಹೋತ್ಸವ ಜರುಗಲಿದೆ.

ಇಂದು ಬೆಳಿಗ್ಗೆ 6.30ಕ್ಕೆ ದೀಪಾರಾಧನೆ, ಬ್ರಾಹ್ಮೀ ಮುಹೂರ್ತದಲ್ಲಿ ಘಟ ಸ್ಥಾಪನೆ ನೆರವೇರಲಿದ್ದು, ಶ್ರೀ ದೇವಿಗೆ ಹಂಸವಾಹಿನಿ ಅಲಂಕಾರ ಮಾಡಲಾಗುತ್ತದೆ.

ಪ್ರತಿದಿನ ರಾತ್ರಿ 8 ಗಂಟೆಗೆ ದೇವಸ್ಥಾನದ ಪಾದಗಟ್ಟಿ ಹತ್ತಿರ ಶ್ರೀ ದೇವಿ ಪುರಾಣ ಪ್ರವಚನ ಏರ್ಪಾಡಾಗಿದ್ದು, ಹಾವೇರಿ ಜಿಲ್ಲೆಯ ಹಾವನೂರು ಬಳಿಯ ಕರಡಗಿ ಗ್ರಾಮದ ಹರಿಕಥಾ ವಿದ್ವಾನ್ ಶ್ರೀ ರೇವಣಸಿದ್ದಯ್ಯ ಶಾಸ್ತ್ರಿ ಮತ್ತು ಸಂಗಡಿಗರು ಪ್ರವಚನವನ್ನು ನಡೆಸಿಕೊಡುವರು.

**ಶಾರದಾಂಬ ದೇವಸ್ಥಾನ :** ಎಸ್. ನಿಜಲಿಂಗಪ್ಪ ಬಡಾವಣೆಯ ವರ್ತುಲ ರಸ್ತೆಯಲ್ಲಿರುವ ಶ್ರೀ ಗಣಪತಿ, ಶ್ರೀ ಶಾರದಾಂಬ, ಶ್ರೀ ಚಂದ್ರಮೌಳೀಶ್ವರ ಮತ್ತು ಶ್ರೀ ಶಂಕರಾಚಾರ್ಯರ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 15ರವರೆಗೆ ನವರಾತ್ರಿ ಉತ್ಸವ ನಡೆಯಲಿದೆ.

ಇಂದು ಗಂಗಾಪೂಜೆ ಮತ್ತು ವಿವಿಧ ಪೂಜಾ ಕಾರ್ಯಕ್ರಮಗಳು ಜರುಗಿದ ನಂತರ ಶ್ರೀ ದೇವಿಗೆ ಹಂಸವಾಹನಾಲಂಕಾರ ಮಾಡಲಾಗುತ್ತದೆ.

**ಶ್ರೀ ಶಂಕರ ಮಠ :** ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ



ಮಜ್ಜಗದ್ಗುರು ಶ್ರೀ ಕೂಡಲೀ ಶೃಂಗೇರಿ ಶಂಕರಾಚಾರ್ಯ ಮಹಾಸಂಸ್ಥಾನಂ ಶ್ರೀ ಶಂಕರ ಮಠದಲ್ಲಿ ಇಂದಿನಿಂದ ಇದೇ ದಿನಾಂಕ 17ರವರಗೆ ಶ್ರೀ ಶಾರದ ಶರನ್ನವರಾತ್ರ್ಯುತ್ಸವ ಜರುಗಲಿದೆ. ಇಂದು ಬೆಳಿಗ್ಗೆ 7ಕ್ಕೆ ವಿವಿಧ ಪೂಜಾ ಕಾರ್ಯಕ್ರಮಗಳ ನಂತರ ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ 6.30ಕ್ಕೆ ದೀಪಾರಾಧನೆ ಏರ್ಪಾಡಾಗಿದೆ.

**ತುಳಜಾ ಭವಾನಿ ದೇವಸ್ಥಾನ :** ಕೆಟಿಜೆ ನಗರ 3ನೇ ಮುಖ್ಯ ರಸ್ತೆಯ 11 ಮತ್ತು 12ನೇ ಕ್ರಾಸ್‌ನಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ನಾಡ ಹಬ್ಬ ದಸರಾ ಮಹೋತ್ಸವವು ಇಂದಿನಿಂದ ಇದೇ ದಿನಾಂಕ 13ರವರೆಗೆ ಏರ್ಪಾಡಾಗಿದೆ. 9 ದಿನಗಳ ಕಾಲ ಶ್ರೀ ದೇವಿಗೆ ವಿಶೇಷ ಅಲಂಕಾರ ಮಾಡಲಾಗುತ್ತದೆ.

**ಕಾಳಿಕಾ ದೇವಿ ದೇವಸ್ಥಾನ :** ಕಾಳಿಕಾ ದೇವಿ ರಸ್ತೆಯ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಇಂದಿನಿಂದ ನವರಾತ್ರಿ ಉತ್ಸವ ಜರುಗಲಿದೆ. ಪ್ರತಿದಿನ ಶ್ರೀ ದೇವಿಗೆ ಪಂಚಾಮೃತಾಭಿಷೇಕ, ದುರ್ಗಾ ಹೋಮ ಮತ್ತು ಪುಷ್ಪಾಲಂಕಾರ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಇಂದು ಪ್ರಾತಃ ಕಾಲ ಗಣಪತಿ ಪೂಜೆ, ಪುಣ್ಯಾಹ ವಾಚನ, ಘಟಸ್ಥಾಪನೆ, ಧ್ವಜಾರೋಹಣ ನಡೆಯಲಿದೆ.

9 ದಿನಗಳ ಕಾಲ ಸಂಜೆ 6 ಗಂಟೆಗೆ ಶ್ರೀ ಕಾಳಿಕಾ ದೇವಿ ಮಹಿಳಾ ಭಜನಾ ಮಂಡಳಿಯಿಂದ ಲಲಿತ ಸಹಸ್ರ ನಾಮ ಪಾರಾಯಣ, ಪ್ರತಿದಿನ ಸಂಜೆ 7 ಗಂಟೆಗೆ ಟಿ. ಪರಮೇಶ್ವರಚಾರ್ ಮತ್ತು ಎನ್. ರಮೇಶಚಾರ್ ಇವರಿಂದ ಶ್ರೀ ದೇವಿಯ ಪಾರಾಯಣ ಜರುಗಲಿದೆ.

**ಶಾಮನೂರು :**



ಶಾಮನೂರಿನ ಜನತಾ ಕಾಲೋನಿಯಲ್ಲಿರುವ ಶ್ರೀ ಮಾಲಸಾಂಬ ಗಂಗಮಾಳಮ್ಮ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 15ರವರೆಗೆ ನವರಾತ್ರಿ ಉತ್ಸವ ಜರುಗಲಿದೆ. ಇಂದು ಬೆಳಿಗ್ಗೆ 10.30ಕ್ಕೆ ನವಗ್ರಹ ಹೋಮ, ರಾತ್ರಿ 8.30ಕ್ಕೆ ದೀಪಾರಾಧನೆ, ಇದೇ ದಿನಾಂಕ 15ರ ಶುಕ್ರವಾರ ಬೆಳಿಗ್ಗೆ 6.30ಕ್ಕೆ ಶ್ರೀ ದೇವಿಯ ಗಂಗಾಪೂಜೆ ನಡೆಯಲಿದೆ.

## ಆವರಗೊಳ್ಳ, ರಾಣೇಬೆನ್ನೂರಿನಲ್ಲಿ ಇಂದಿನಿಂದ ಶಿವ ಪೂಜಾನುಷ್ಠಾನ

ದಾವಣಗೆರೆ, ಅ.6- ಆವರಗೊಳ್ಳ ಪುರವರ್ಗ ಹಿರೇಮಠ ಹಾಗೂ ರಾಣೇಬೆನ್ನೂರಿನ ಹಿರೇಮಠದಲ್ಲಿ ಲೋಕ ಕಲ್ಯಾಣಕ್ಕಾಗಿ, ವಿಶ್ವಶಾಂತಿಗಾಗಿ 27 ನೇ ವರ್ಷದ ಶರನ್ನವರಾತ್ರಿ ದಸರಾ ಮಹೋತ್ಸವದ ಶಿವ ಪೂಜಾನುಷ್ಠಾನ ಕಾರ್ಯಕ್ರಮ ಹಮ್ಮಿಕ್ರೊಳ್ಳಲಾಗಿದೆ. ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಶಿವ ಪೂಜಾನುಷ್ಠಾನ ಕಾರ್ಯಕ್ರಮ ನೆರವೇರಿಸಿಕೊಡಲಿದ್ದಾರೆ.

## ಏಷಿಯಾದಲ್ಲೇ ಮಾನವರು ಮೊದಲು ಇದ್ದದ್ದು ಭಾರತದಲ್ಲಿ

ನವದೆಹಲಿ, ಅ. 6 - ಭಾರತದಲ್ಲಿ 1.77 ಲಕ್ಷ ವರ್ಷಗಳ ಹಿಂದೆ ಅಚ್ಯೂಲಿಯನ್ ಶಿಲಾಯುಧ ಬಳಸುವ ಆದಿ ಮಾನವರಿದ್ದರು. ಇವರು ಏಷಿಯಾದಲ್ಲಿ ಪತ್ತೆಯಾದ ಆದಿ ಮಾನವರಲ್ಲಿ ಮೊದಲಿಗರು ಎಂದು ಅಧ್ಯಯನವೊಂದು ತಿಳಿಸಿದೆ.

ಇತಿಹಾಸ ಪೂರ್ವದಲ್ಲಿ ಮನುಕುಲದ ಅಧ್ಯಯನ ನಡೆಸುವಲ್ಲಿ ಶಿಲಾಯುಧಗಳು ಪ್ರಮುಖ ಪಾತ್ರ ವಹಿಸಿವೆ. ಜರ್ಮನಿಯ ಮ್ಯಾಕ್ಸ್ ಪ್ಲಾಂಕ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆಫ್ ಹ್ಯೂಮನ್ ಹಿಸ್ಟರಿ ಈ ಬಗ್ಗೆ ಅಧ್ಯಯನ ವರದಿ ಪ್ರಕಟಿಸಿದೆ. ರಾಜಸ್ಥಾನದ ಥಾರ್ ಮರುಭೂಮಿಯಲ್ಲಿ ಪತ್ತೆಯಾದ ಸುಳಿವುಗಳ ಪ್ರಕಾರ, 1.77 ಲಕ್ಷ ವರ್ಷಗಳ ಹಿಂದೆ ಈ ಭಾಗದಲ್ಲಿ ಅಚ್ಯೂಲಿಯನ್ ಜನರು ವಾಸವಾಗಿದ್ದರು. ಇದಾದ ನಂತರ ಆದಿ ಮಾನವರು ಏಷಿಯಾದಾದ್ಯಂತ ಹರಡಿದ್ದಾರೆ.

ಇತ್ತೀಚೆಗೆ ಪತ್ತೆಯಾಗಿರುವ ಸಾಕ್ಷಿಗಳ ಪ್ರಕಾರ, ಹೋಮೋ ಸೇಪಿಯನ್‌ಗಳು ಆ ಸಂದರ್ಭದಲ್ಲಿ ವಾಸವಾಗಿದ್ದ ಇತರೆ ಸಹೋದರ ಸಮುದಾಯಗಳ ಜೊತೆ ಒಡನಾಟ ಹೊಂದಿದ್ದರು ಎಂದು ಸಂಶೋಧಕರು ಹೇಳಿದ್ದಾರೆ.

ಅಮೆರಿಕದಲ್ಲಿ ಮೊದಲು ಕಂಡು ಬಂದಿದ್ದ ಆದಿ ಮಾನವರು, ನಂತರ ವಿಶ್ವದಾದ್ಯಂತ ಹರಡಿದ ರೀತಿ ಅರಿಯುವಲ್ಲಿ ಈ ಅಧ್ಯಯನಗಳು ಪ್ರಾಮುಖ್ಯತೆ ಪಡೆದಿವೆ. ದಕ್ಷಿಣ ಏಷಿಯಾದಲ್ಲಿ ಆದಿ ಮಾನವರ ಅವಶೇಷಗಳು ಇದುವರೆಗೂ ಪತ್ತೆಯಾಗಿರುವುದು ಕಡಿಮೆ.

# ಮಳೆಯಲ್ಲೂ ಆರದ ವೈದ್ಯ ವಿದ್ಯಾರ್ಥಿಗಳ ಹೋರಾಟದ ಕಾವು

ದಾವಣಗೆರೆ, ಅ.6- ಜೆಜೆಎಂ ವೈದ್ಯಕೀಯ ಕಾಲೇಜಿನ ವೈದ್ಯ ವಿದ್ಯಾರ್ಥಿಗಳು ನಡೆಸುತ್ತಿರುವ ಹೋರಾಟ 6ನೇ ದಿನವಾದ ಇಂದೂ ಸಹ ಮುಂದುವರೆದಿತ್ತು. ಜಡಿ ಮಳೆ ಸುರಿದರೂ ಹೋರಾಟದಿಂದ ಹಿಂದೆ ಸರಿಯದೇ ಮಳೆಯಲ್ಲಿ ನೆನೆಯುತ್ತಾ, ಚಳಿಯಲ್ಲಿ ನಡುಗುತ್ತಾ ಶಿಷ್ಯ ವೇತನಕ್ಕಾಗಿ ಬಿಗಿಪಟ್ಟು ಹಿಡಿದಿದ್ದರು.

ನಗರದ ಶ್ರೀ ಜಯದೇವ ಮುರುಘ ರಾಜೇಂದ್ರ ವೃತ್ತದಲ್ಲಿ ಟೆಂಟ್ ಹಾಕಿಕೊಂಡು ವಿಭಿನ್ನವಾಗಿ ಹೋರಾಟದ ಮುಖೇನ ಸರ್ಕಾರ ಹಾಗೂ ಕಾಲೇಜು ಆಡಳಿತ ಮಂಡಳಿಯ ಗಮನ ಸೆಳೆಯುತ್ತಿರುವ ಪ್ರತಿಭಟನಾ ನಿರತ ವೈದ್ಯ ವಿದ್ಯಾರ್ಥಿಗಳು ಮಳೆಯನ್ನೂ ಲೆಕ್ಕಿಸದೇ ಕೊಡೆಗಳನ್ನು ಹಿಡಿದು, ಜರ್ಕಿನ್‌ಗಳನ್ನು ಹಾಕಿಕೊಂಡು ಅವುಗಳ ಆಶ್ರಯದಲ್ಲಿ ಹೋರಾಟ ನಡೆಸಿದರು. ಅಲ್ಲದೇ ತಮಗೆ ನ್ಯಾಯವಾಗಿ ಬರಬೇಕಾದ ಶಿಷ್ಯ ವೇತನ ಕೊಡದ ಹೊರತು, ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಎಚ್ಚರಿಸಿದರು.

ಕಳೆದ 5 ತಿಂಗಳಿನಿಂದ ತಮಗೆ ಬರಬೇಕಾದ ಶಿಷ್ಯ ವೇತನವನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ಕಳೆದ ಐದಾರು ದಿನಗಳಿಂದಲೂ ನಾವು ಅನಿರ್ದಿಷ್ಟಾವಧಿ ಹೋರಾಟ ನಡೆಸಿದ್ದೇವೆ. ಇನ್ನೂ ಸಹ ಸರ್ಕಾರವಾಗಲೀ, ಕಾಲೇಜು ಆಡಳಿತ ಮಂಡಳಿಯಾಗಲೀ ನಮ್ಮ ಬೇಡಿಕೆಗಳನ್ನು ಈಡೇರಿಸುವತ್ತ ಗಮನ ಹರಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ, ಕಾಲೇಜು ಆಡಳಿತ ಮಂಡಳಿಗಳ ಮಧ್ಯೆ ಹಗ್ಗ ಜಗ್ಗಾಟದಲ್ಲಿ ನಮಗೆ ಬರಬೇಕಾದ ಶಿಷ್ಯ ವೇತನ ನೀಡಲು ಮೀನಾಮೇಷ ಎಣಿಸಲಾಗುತ್ತಿದೆ. ಕೋವಿಡ್ ವಿರುದ್ಧ ಕೆಲಸ ಮಾಡುವ ವೈದ್ಯರಿಗೆ ಸಕಾಲಕ್ಕೆ ವೇತನ ಪಾವತಿಸಲು ಎಲ್ಲಾ ರಾಜ್ಯಗಳಿಗೂ ಸುಪ್ರೀಂ ಕೋರ್ಟ್‌ನ ಸ್ಪಷ್ಟ ನಿರ್ದೇಶನವಿದೆ. ಆದರೆ, ಸುಪ್ರೀಂ ಕೋರ್ಟ್ ಆದೇಶವನ್ನೇ ಧಿಕ್ಕರಿಸಿ, ಕಾಲೇಜು ಆಡಳಿತ ಮಂಡಳಿ ಹಾಗೂ ರಾಜ್ಯ ಸರ್ಕಾರ ನಮಗೆ ನೀಡಬೇಕಾದ ಶಿಷ್ಯ ವೇತನವನ್ನು ಪಾವತಿಸದೇ, ಸತಾಯಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

# ವಾರಕ್ಕೊಮ್ಮೆ ಚರಂಡಿಗಳಿಗೆ ಬ್ಲೀಚಿಂಗ್ ಸಿಂಪರಣೆ, ಫಾಗಿಂಗ್‌ಗೆ ಪಾಲಿಕೆ ಕ್ರಮ



ದಾವಣಗೆರೆ, ಅ.6- ನಗರದ ಪ್ರತಿ ವಾರ್ಡ್‌ಗಳಲ್ಲಿ ವಾರಕ್ಕೊಮ್ಮೆ ಚರಂಡಿಗಳಿಗೆ ಬ್ಲೀಚಿಂಗ್ ಸಿಂಪರಣೆ ಹಾಗೂ ಫಾಗಿಂಗ್ ಮಾಡುವ ಬಗ್ಗೆ ಮಂಗಳವಾರ ಮಹಾನಗರ ಪಾಲಿಕೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ನಗರ ಸ್ವಚ್ಛತಾ ಕಾರ್ಯಗಳನ್ನು ನಡೆಸುವ ಜೊತೆಗೆ ಡೆಂಗ್ಯೂ ಮತ್ತು ಚಿಕುನ್‌ಗುನ್ಯಾ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಮಹಾಪೌರರಾದ ಎಸ್.ಟಿ. ವೀರೇಶ್ ತಿಳಿಸಿದರು.

ಈಗಾಗಲೇ ಆರೋಗ್ಯ ಇಲಾಖೆ ವತಿಯಿಂದ ಮುಂಜಾಗ್ರತಾ ಕ್ರಮವಾಗಿ ಮನೆ ಮನೆಗೂ ತೆರಳಿ 'ಲಾರ್ವಾ' ಸಮೀಕ್ಷೆ ಆರಂಭಿಸಿದ್ದು, ಸಮೀಕ್ಷೆ ಯಶಸ್ಸಿಗಾಗಿ ಮತ್ತು ಇಲಾಖೆಯೊಂದಿಗೆ ಕೈಜೋಡಿಸಲು ಪಾಲಿಕೆಯಿಂದ 50 ಜನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಉಪ ಮಹಾಪೌರರಾದ ಶಿಲ್ಪಾ ಜಯಪ್ರಕಾಶ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಎಲ್.ಡಿ. ಗೋಣೆಪ್ಪ, ರೇಣುಕಾ ಶ್ರೀನಿವಾಸ್, ಉಮಾ ಪ್ರಕಾಶ್, ಗೀತಾ ದಿಳ್ಯೆಪ್ಪ, ಚಮನ್‌ಸಾಬ್, ಆಯುಕ್ತರಾದ ವಿಶ್ವನಾಥ್ ಪಿ. ಮುದಜ್ಜಿ, ಮಲೇರಿಯಾ ನಿಯಂತ್ರಣಾಧಿಕಾರಿ ಡಾ. ನಟರಾಜ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ವೆಂಕಟೇಶ್, ಪಾಲಿಕೆ ಆರೋಗ್ಯಾಧಿಕಾರಿ ಡಾ. ಸುಧೀಂದ್ರ, ಸಹಾಯಕ ನಿರ್ದೇಶಕ ಡಾ. ಸಂತೋಷ್ ಮತ್ತಿತರರಿದ್ದರು.

## ನಿಟ್ಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಇಂದಿನಿಂದ ದಸರಾ



ದಾವಣಗೆರೆ - ನಿಟ್ಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 15 ರವರೆಗೆ ಪ್ರತಿದಿನ ಸಂಜೆ ಶ್ರೀ ದೇವಿ ಮಹಾತ್ಮೆ ಪ್ರವಚನ ನಡೆಯಲಿದೆ.

ಇಂದು ಸಂಜೆ 7ಕ್ಕೆ ಘಟಸ್ಥಾಪನೆ ಹಾಗೂ ದೀಪಾರಾಧನೆ, ದಿನಾಂಕ 12ರ ಮಂಗಳವಾರ ಮಧ್ಯಾಹ್ನ 3.30ಕ್ಕೆ ಕುಂಭಮೇಳ, ದಿನಾಂಕ 13ರ ಬುಧವಾರ ಬೆಳಿಗ್ಗೆ 5.30ಕ್ಕೆ ದುರ್ಗಾ ಹೋಮ, ರುದ್ರಾಭಿಷೇಕ ಹಾಗೂ ದೇವಿಗೆ ಕುಂಭಾಭಿಷೇಕ, ಮಧ್ಯಾಹ್ನ ಅನ್ನ ಸಂತರ್ಪಣೆ, ದಿನಾಂಕ 14ರ ಗುರುವಾರ ಆಯುಧ ಪೂಜೆ ಅದೇ ದಿನ ಸಂಜೆ 7.30ಕ್ಕೆ ಗಂಗೆ ಪೂಜೆ ಕಾರ್ಯಕ್ರಮ, ದಿನಾಂಕ 15ರ ಶುಕ್ರವಾರ ಸಂಜೆ 6ಕ್ಕೆ ಗ್ರಾಮ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಹಾಗೂ ಶ್ರೀ ಆಂಜನೇಯ ಸ್ವಾಮಿ ಉತ್ಸವ ಮೂರ್ತಿಗಳೊಂದಿಗೆ ಬನ್ನಿ ಮುಡಿಯುವ ಕಾರ್ಯಕ್ರಮವಿರುತ್ತದೆ. ಪ್ರತಿದಿನ ಸಂಜೆ ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿ ಅವರಿಂದ ಭಜನಾ ಕಾರ್ಯಕ್ರಮ ನಡೆಯಲಿದೆ.

## ಹರಿಹರದಲ್ಲಿ ದಸರಾ ಆಚರಣೆ


ಹರಿಹರ, ಅ.6- ದಸರಾ ಮಹೋತ್ಸವ ಸಮಿತಿಯ ಸಭೆಯು ಕಳೆದ ವಾರ ನಡೆದು, ನಾಳೆ ದಿನಾಂಕ 7ರಿಂದ 9 ದಿನಗಳ ಕಾಲ ಸರಳವಾಗಿ ದಸರಾ ಮಹೋತ್ಸವ ಆಚರಿಸಲು ತೀರ್ಮಾನಿಸಲಾಯಿತು.

ಜಗನ್ಮಾತೆಯ ವಿಗ್ರಹವನ್ನು ದಿನಾಂಕ 7 ರ ಗುರುವಾರ ಪ್ರತಿಷ್ಠಾಪಿಸಿ, ನಿತ್ಯ ಸಂಜೆ ಮಾತೆಯರಿಂದ ಕುಂಕುಮಾರ್ಚನೆ ನೆರವೇರಿಸುವುದು. ದಿನಾಂಕ 9 ರ ಶನಿವಾರ ಬೆಳಿಗ್ಗೆ 9 ಗಂಟೆಗೆ ಶಂಕರ ಭಗವತ್ಪಾದರ ವಿರಚಿತ ಶ್ರೀ ಸೌಂದರ್ಯಲಹರಿ ಪಠಣ ಮಾಡಲಾಗುತ್ತದೆ.

ದಿನಾಂಕ 12 ರ ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಮಕ್ಕಳಿಗೆ ಶಾಸ್ತ್ರೋಕ್ತ ಅಕ್ಷರಾಭ್ಯಾಸ ಕಾರ್ಯಕ್ರಮ, ದಿ. 15 ರ ಶುಕ್ರವಾರ ಶ್ರೀದೇವಿಯನ್ನು ಕ್ಷೇತ್ರಪಾಲ ಶ್ರೀ ಹರಿಹರೇಶ್ವರ ಸ್ವಾಮಿಯ ಜೊತೆ ಮೆರವಣಿಗೆ ಮೂಲಕ ಸಾಮೂಹಿಕ ಬನ್ನಿ ಮುಡಿಯುವುದು.

ಸಭೆಯಲ್ಲಿ ಟಿ.ಜೆ. ಮುರುಗೇಶ್, ಶಿವಪ್ರಕಾಶ ಶಾಸ್ತ್ರಿ, ಮಾಲತೇಶ ಭಂಡಾರಿ, ನಾಗರಾಜ್ ಐರಣಿ, ಪರಶುರಾಮ ಕಾಟ್ವೆ, ಶ್ರೀನಿವಾಸ ಮೆಹರ್ವಾಡೆ, ಪದ್ಮಾ ಸುಭಾಷ್ ಬೋಂಗಾಳೆ, ಅಂಬಾಸಾ ಹಂಸಾಗರ, ರಾಜು ಖಿರೋಜಿ, ಜಿ. ನಾಗೇಂದ್ರಪ್ಪ, ಅಜಿತ್ ಸಾವಂತ್, ಜಿ.ಎಂ. ಪ್ರಶಾಂತ್, ಬಸವರಾಜ್ ಹಲಸಬಾಳು, ಡಿ. ರೇವಣಸಿದ್ದಪ್ಪ, ವಾಸು ಚಂದಾಪುರ, ಹನುಮಂತ ರೆಡ್ಡಿ, ಕರಿಬಸಪ್ಪ ಕಂಚಿಕೇರಿ ಮತ್ತು ಇತರರು ಪಾಲ್ಗೊಂಡಿದ್ದರು.

## ಮಳೆಗೆ ರಸ್ತೆ ಜಲಾವೃತ : ಸಂಚಾರ ಅಡಚಣೆ ತಪ್ಪಿಸಿದ ಮೇಯರ್ ವೀರೇಶ್



ದಾವಣಗೆರೆ, ಅ.6- ಭಾರೀ ಮಳೆಯಿಂದಾಗಿ ನಗರದ ಈರುಳ್ಳಿ ಮಾರುಕಟ್ಟೆ ಬಳಿಯ ಅಂಡರ್ ಪಾಸ್ ಹತ್ತಿರ ರಸ್ತೆ ಜಲಾವೃತಗೊಂಡು ವಾಹನಗಳ ಸಂಚಾರಕ್ಕೆ ಅಡಚಣೆಯುಂಟಾಗಿದ್ದನ್ನು ಮೇಯರ್ ಎಸ್. ಟಿ. ವೀರೇಶ್ ಖುದ್ದು ಸರಿಪಡಿಸಿದರು.

ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಗಮನಕ್ಕೆ ಬರುತ್ತಿದ್ದಂತೆ ಕೂಡಲೇ ಎಸ್.ಟಿ. ವೀರೇಶ್ ಹಾಗೂ 19ನೇ ವಾರ್ಡಿನ ಸದಸ್ಯ ಶಿವಪ್ರಕಾಶ್ ಇಬ್ಬರೂ ಜೊತೆಗೂಡಿ ಸ್ಥಳಕ್ಕಾಗಮಿಸಿ, ಮಳೆ ನೀರಿನ ಜೊತೆಗೆ ರಸ್ತೆಯಲ್ಲೆಲ್ಲಾ ಹರಿದು ಬಂದಿದ್ದ ತ್ಯಾಜ್ಯಗಳನ್ನು ಯಾವುದೇ ಉಪಕರಣಗಳ ಬಳಸದೇ ತಾವೇ ಕೈಯಲ್ಲಿ ತೆಗೆದು ಸ್ವಚ್ಚಗೊಳಿಸುವ ಮುಖಾಂತರ ನೀರು ಸರಾಗವಾಗಿ ಹರಿಯುವಂತೆ ಮಾಡಿ ಸಂಚಾರ ಸುಗಮಕ್ಕೆ ಕಾರಣೀಭೂತರಾದರು.

ಮೇಯರ್ ಅವರ ಈ ಕಾರ್ಯವನ್ನು ಕಣ್ಣಾರೆ ಕಂಡ ವಾಹನ ಸವಾರರು ನಿಬ್ಬೆರಗಾದರಲ್ಲದೇ, ಮೇಯರ್ ಆದರೂ ಸಹ ಸ್ವತಃ ಕಾರ್ಯಕ್ಕಿಳಿದಿರುವುದಕ್ಕೆ ಪ್ರಶಂಸೆಯನ್ನೂ ವ್ಯಕ್ತಪಡಿಸಿದ್ದಾರೆ.

## ಪಟಾಕಿಗಳ ನಿಷೇಧ ಪಾಲನೆಗೆ ಸೂಚನೆ

ನವದೆಹಲಿ, ಅ. 6 - ಹಸಿರು ಪಟಾಕಿ ಸೋಗಿನಲ್ಲಿ ನಿಷೇಧಿತ ವಸ್ತುಗಳನ್ನು ಪಟಾಕಿ ಉತ್ಪಾದಕರು ಬಳಸುತ್ತಿದ್ದಾರೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಸರ ಪಟಾಕಿಗಳ ನಿಷೇಧಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಆದೇಶವನ್ನು ರಾಜ್ಯಗಳು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಷಾ ಹಾಗೂ ಎ. ಎಸ್. ಬೋಪಣ್ಣ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ಸೂಚನೆಗಳನ್ನು ನೀಡಿದ್ದ, ಹಬ್ಬ ಎಂದರೆ ಅಬ್ಬರದ ಪಟಾಕಿ ಸಿಡಿಸುವುದಲ್ಲ. ಸರ ಪಟಾಕಿ ಗಳನ್ನೂ ಸಿಡಿಸ ಬಾರದು ಎಂದು ಹೇಳಿದೆ. ಈ ಹಿಂದೆ ಆದೇಶ ಹೊರಡಿಸಿ ದ್ದರೂ ಸಹ ಪ್ರತಿ ರಾಜ್ಯ ಹಾಗೂ ಪ್ರತಿ ನಗರದಲ್ಲಿ ಸರ ಪಟಾಕಿಗಳು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿವೆ ಎಂದು ನ್ಯಾಯಾಲಯ ಹೇಳಿದೆ. ಕೆಲ ಪಟಾಕಿ ಉತ್ಪಾದಕರು ದೊಡ್ಡ ಪ್ರಮಾಣದಲ್ಲಿ ಬೇರಿಯಂ ಸಾಲ್ಟ್ ಖರೀದಿಸಿದ್ದು, ನಿಯಮ ಮೀರಿ ಪಟಾಕಿಗಳ ಉತ್ಪಾದನೆಯಲ್ಲಿ ತೊಡಗಿದ್ದಾರೆ ಎಂದೂ ನ್ಯಾಯಾಲಯ ಹೇಳಿದೆ.

## ಪಂಚಮಸಾಲಿ ಪೀಠದಲ್ಲಿ ಇಂದು ನವದುರ್ಗೆಯರ ಘಟಸ್ಥಾಪನೆ

ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಮಹಿಳಾ ಘಟಕದ ಜಿಲ್ಲಾ ಮಹಿಳಾ ಘಟಕ ಹರಿಹರ, ರಾಣೇಬೆನ್ನೂರು, ದಾವಣಗೆರೆ ನಗರ ಮತ್ತು ತಾಲ್ಲೂಕು ಮಹಿಳಾ ಘಟಕದ ವತಿಯಿಂದ ಹರಿಹರದ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ನವರಾತ್ರಿಯ ನವದುರ್ಗೆಯರ ಘಟಸ್ಥಾಪನೆ ಕಾರ್ಯಕ್ರಮವನ್ನು ಯೋಗ ಸಿಂಹಾಸನಾಧೀಶ್ವರ ಶ್ರೀ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಮಹಿಳಾ ಘಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಮತಿ ವೀಣಾ ಕೊಟ್ರೇಶ್ ತಿಳಿಸಿದ್ದಾರೆ.

## ರಾಜ್ಯ ಸೇರಿ 7 ಕಡೆ ಜವಳಿ ಪಾರ್ಕ್

**(1ನೇ ಪುಟದಿಂದ)** ಸ್ಥಾಪನೆಯಾಗಲಿವೆ. ಗ್ರೀನ್‌ಫೀಲ್ಡ್ ಪಾರ್ಕ್‌ಗಳಿಗೆ ಗರಿಷ್ಠ ಅಭಿವೃದ್ಧಿ ಬಂಡವಾಳ ಬೆಂಬಲ 500 ಕೋಟಿ ರೂ. ಆಗಲಿದೆ. ಬ್ರೌನ್‌ಫೀಲ್ಡ್‌ಗಳಿಗೆ 200 ಕೋಟಿ ರೂ. ಒದಗಿಸಲಾಗುವುದು. ಇದರ ಜೊತೆಗೆ 300 ಕೋಟಿ ರೂ.ಗಳ ಸ್ಪರ್ಧಾ ಉತ್ತೇಜನ ಬೆಂಬಲ ಸಹ ಪ್ರತಿ ಪಾರ್ಕ್‌ಗೆ ನೀಡಲಾಗುವುದು.

ಪಿಎಂ - ಮಿತ್ರ ಯೋಜನೆಯಡಿ ಶೇ.50ರಷ್ಟು ಪ್ರದೇಶವನ್ನು ಉತ್ಪಾದನಾ ಚಟುವಟಿಕೆಗಳಿಗೆ, ಶೇ.20 ರಷ್ಟನ್ನು ಸೌಲಭ್ಯಗಳಿಗೆ ಹಾಗೂ ಶೇ.10ರಷ್ಟನ್ನು ವಾಣಿಜ್ಯ ಅಭಿವೃದ್ಧಿಗೆ ಮೀಸಲಿಡಲಾಗುವುದು. ವಿಶೇಷ ಉದ್ದೇಶದ ಕಾರ್ಯಪಡೆ (ಎಸ್.ಪಿ.ವಿ.) ಪಾರ್ಕ್‌ಗಳ ಅಭಿವೃದ್ಧಿ ಮಾಡಲಾಗುವುದು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಖಾಸಗಿ ಸಹಭಾಗಿತ್ವದಲ್ಲಿ ಯೋಜನೆ ಜಾರಿಗೆ ತರಲಿವೆ.

ಕೈಗಾರಿಕಾ ಪಾರ್ಕ್ ಸ್ಥಾಪಿಸುವುದಷ್ಟೇ ಅಲ್ಲದೇ, ವಿನಾಯಿತಿ ಅವಧಿಯಲ್ಲಿ ನಿರ್ವಹಣೆಯೂ ಸಹ ಡೆವಲಪರ್‌ಗಳ ಜವಾಬ್ದಾರಿಯಾಗಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಜಂಟಿಯಾಗಿ ಡೆವಲಪರ್ ಆಯ್ಕೆಯ ಮಾನದಂಡ ನಿರ್ಧರಿಸಲಿವೆ.

ಪ್ರಸ್ತಾಪಿತ ಎಸ್.ಪಿ.ವಿ.ನಲ್ಲಿ ರಾಜ್ಯ ಸರ್ಕಾರ ಬಹುಪಾಲಿನ ಮಾಲೀಕತ್ವ ಹೊಂದಿರಲಿದೆ. ರೂಪಿಸಲಾದ ಕೈಗಾರಿಕಾ ಪ್ರದೇಶಗಳಿಂದ ಸಿಗುವ ಬಾಡಿಗೆಯನ್ನು ರಾಜ್ಯ ಸರ್ಕಾರ ಪಡೆಯಲಿದೆ ಹಾಗೂ ಈ ಕೈಗಾರಿಕಾ ಪ್ರದೇಶವನ್ನು ವಿಸ್ತರಿಸುವ ಅಧಿಕಾರವನ್ನೂ ರಾಜ್ಯ ಸರ್ಕಾರ ಹೊಂದಿರಲಿದೆ. ಕೈಗಾರಿಕಾ ಪ್ರದೇಶದಲ್ಲಿ ಉತ್ಪಾದನೆಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ 300 ಕೋಟಿ ರೂ.ಗಳನ್ನು ಒದಗಿಸಲಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಇತರೆ ಉತ್ತೇಜನ ಸೌಲಭ್ಯಗಳೂ ಕೈಗಾರಿಕಾ ಪ್ರದೇಶಕ್ಕೆ ಲಭ್ಯವಾಗಲಿವೆ.

ಕೈಗಾರಿಕಾ ಪ್ರದೇಶಗಳಲ್ಲಿ ಎಲ್ಲ ಆಧುನಿಕ ಸೌಲಭ್ಯ, ರಸ್ತೆ, ವಿದ್ಯುತ್, ನೀರು ಹಾಗೂ ತ್ಯಾಜ್ಯ ನೀರು ಸಂಸ್ಕರಣೆ ಸೌಕರ್ಯಗಳು ಲಭ್ಯವಾಗಲಿವೆ. ಪೂರಕವಾಗಿ ಕಾರ್ಮಿಕರ ಹಾಸ್ಟೆಲ್, ವಸತಿ, ಸಾಗಣೆ ಪಾರ್ಕ್, ಗೋದಾಮು, ವೈದ್ಯಕೀಯ, ತರಬೇತಿ ಹಾಗೂ ಕೌಶಲ್ಯಾಭಿವೃದ್ಧಿ ಯೋಜನೆಗಳೂ ಲಭ್ಯವಾಗಲಿವೆ.

## ಮೋದಿ ಸ್ಮರಣಿಕೆ : ಕ್ರೀಡಾ ಪರಿಕರಗಳಿಗೆ ಹೆಚ್ಚಿನ ಬಿಡ್

**(1ನೇ ಪುಟದಿಂದ)** ಬಿಡ್ ಮಾಡಲಾಗಿದೆ.

ಸೆಪ್ಟೆಂಬರ್ 17ರಿಂದ ಹರಾಜು ಆರಂಭವಾಗಿತ್ತು. ಒಲಂಪಿಕ್ ಹಾಗೂ ಪ್ಯಾರಾಲಿಂಪಿಕ್ ಕ್ರೀಡಾಪಟುಗಳ ಸಲಕರಣೆಗಳ ಹರಾಜಿನ ಮೇಲೆ ಹೆಚ್ಚಿನ ಗಮನ ಇತ್ತು. ಬಂಗಾರದ ಪದಕ ಪಡೆದಿದ್ದ ನೀರಜ್ ಚೋಪ್ರ ಅವರ ಜಾವಲಿನ್‌ಗೆ ಮೊದಲ ದಿನವೇ ಹತ್ತು ಕೋಟಿ ರೂ. ಬಿಡ್ ಬಂದಿದ್ದು, ಅದನ್ನು ನಕಲಿ ಎಂಬ ಶಂಕೆಯ ಮೇಲೆ ರದ್ದುಗೊಳಿಸಲಾಗಿತ್ತು.

ವಾರದ ನಂತರ ಪ್ಯಾರಾಲಿಂಪಿಕ್ ಬಂಗಾರದ ಪದಕ ಪಡೆಯಲು ಸುಮಿತ್ ಅಂತಿಲ್ ಅವರು ಬಳಸಿದ ಜಾವಲಿನ್‌ಗೆ ಅತಿ ಹೆಚ್ಚಿನ 1,00,50,000 ರೂ.ಗಳ ಬಿಡ್ ದೊರೆತಿದೆ. ಅಯೋಧ್ಯೆಯ ರಾಮ ಮಂದಿರದ ಕಟ್ಟಿಗೆ ಮಾದರಿಗೆ 2.50 ಲಕ್ಷ ರೂ.ಗಳ ಬಿಡ್ ದೊರೆತಿದೆ. ಟೋಕಿಯೋ ಪ್ಯಾರಾಲಿಂಪಿಕ್‌ನ ಬ್ಯಾಡ್ಮಿಂಟನ್‌ನಲ್ಲಿ ಬಂಗಾರದ ಪದಕ ಪಡೆದಿದ್ದ ಕೃಷ್ಣ ನಗರ ಬಳಸಿದ್ದ ರಾಕೆಟ್‌ಗೆ 80.15 ಲಕ್ಷ ರೂ.ಗಳ ಬಿಡ್ ದೊರೆತಿದೆ.

## ದಾವಣಗೆರೆ - ಚನ್ನಗಿರಿ ತಾಲ್ಲೂಕುಗಳಲ್ಲಿ ವಿದ್ಯುತ್ ವ್ಯತ್ಯಯ ಇಂದು

ಕುಕ್ಕುವಾಡ, ಕೋಲಕುಂಟೆ, ಗಿರಿಯಾಪುರ, ಕೈದಾಳೆ, ಹದಡಿ, ಕಲ್ಲಬಂಡೆ, ಲೋಕಿಕೆರೆ, ಬಲ್ಲೂರು, ಕನಗೊಂಡನಹಳ್ಳಿ, ಮತ್ತಿ, ನಾಗರಸನಹಳ್ಳಿ, ಹೂವಿನಮಡು ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಶ್ಯಾಗಲೆ, ಕಂದಗಲ್ಲು, ಕೋಡಿಹಳ್ಳಿ, ಗೋಣಿವಾಡ ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ದೊಡ್ಡ ಮಲ್ಲಾಪುರ, ಸಿದ್ದನಮಠ, ಕಾಕನೂರು, ಸಂತೇಬೆನ್ನೂರು, ಬೆಳ್ಳಿಗನೂಡು, ನಿಂಬಾಪುರ, ಅರಳಿಕಟ್ಟೆ, ತಣಿಗೆರೆ, ಚಿಕ್ಕಬೆನ್ನೂರು, ಹಿರೇಕೊಗಲೂರು, ದೊಡ್ಡಬ್ಬಿಗೆರೆ, ಅಬ್ಬಿಗೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಕೆರೆಬಿಳಚಿ, ಹೊಸೂರು, ಚನ್ನಾಪುರ, ಆಲೂರು, ಸೋಮಲಾಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಬಸವಾಪಟ್ಟಣ, ಹರ್ಲಿಪುರ, ಹೊಸಹಳ್ಳಿ, ಮರಬನಹಳ್ಳಿ, ಚಿರಡೋಣಿ, ಯಲ್ಲೋದಹಳ್ಳಿ, ಪುಣ್ಯಸ್ಥಳ, ಸಂಗಾಹಳ್ಳಿ, ಸಿದ್ದೇಶ್ವರ ನಗರ, ನಿಲೋಗಲ್, ಕಂಚುಗಾರನಹಳ್ಳಿ, ದಾಗಿನಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ತ್ಯಾವಣಿಗಿ, ನೆಲ್ಕುದುರೆ, ದೊಡ್ಡಘಟ್ಟ, ಕತ್ತಲಗೆರೆ, ಕಾರಿಗನೂರು, ಬೆಳಲಗೆರೆ, ಅರೇಹಳ್ಳಿ, ನವಿಲೆಹಾಳು, ಕಬ್ಬಳ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವುಂಟಾಗಲಿದೆ.

## ದಾವಲ್‌ಪೇಟೆ : ಚೌಡೇಶ್ವರಿ ದೇವಸ್ಥಾನದಲ್ಲಿ ದಸರಾ



ದಾವಲ್‌ಪೇಟೆಯಲ್ಲಿರುವ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 15 ರವರೆಗೆ ನವರಾತ್ರಿ ಕಾರ್ಯಕ್ರಮಗಳು ನಡೆಯಲಿವೆ. ಇಂದು ಬೆಳಿಗ್ಗೆ ಅರಿಶಿನ ಕುಂಕುಮ ಅಲಂಕಾರ, ನಾಳೆ ಶುಕ್ರವಾರ ಸಂತಾನ ಲಕ್ಷ್ಮಿ ಅಲಂಕಾರ ನಡೆಯುವುದು.

## ಸಾಯಿಬಾಬಾ ದೇವಸ್ಥಾನದಲ್ಲಿ ಇಂದು

ಶ್ರೀ ಸಾಯಿಬಾಬಾರವರ ಪುಣ್ಯಾರಾಧನೆ ಮಹೋತ್ಸವವು ದಾವಣಗೆರೆ ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಶ್ರೀ ಸಾಯಿಬಾಬಾ ಮಂದಿರದಲ್ಲಿ ನಡೆಯುತ್ತಿದ್ದು, ಇಂದು ಬೆಳಿಗ್ಗೆ ಗಣ ಹೋಮ, ಲಲಿತ ಸಹಸ್ರ ನಾಮಾವಳಿ, ಸಾಯಿ ಭಜನೆ ಜರುಗಲಿದೆ. ಶ್ರೀ ಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗುತ್ತದೆ.

## ಆನಗೋಡು ಬಳಿ ಕಾರುಗಳ ಡಿಕ್ಕಿ: ಗಾಯ

ದಾವಣಗೆರೆ, ಅ.6- ಎರಡು ಕಾರುಗಳ ಮಧ್ಯೆ ಪರಸ್ಪರ ಡಿಕ್ಕಿ ಸಂಭವಿಸಿದ ಪರಿಣಾಮ ಮೂವರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಆನಗೋಡು ಬಳಿಯ ರಾಷ್ಟ್ರೀಯ ಹೆದ್ದಾರಿ 4ರಲ್ಲಿನ ಸೇತುವೆ ಮೇಲೆ ಸಂಭವಿಸಿದೆ.

ಗಾಯಾಳುಗಳನ್ನು ದಾವಣಗೆರೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಎರಡು ಕಾರುಗಳು ಆನಗೋಡು ಕಡೆಯಿಂದ ದಾವಣಗೆರೆ ಕಡೆಗೆ ಬರುತ್ತಿದ್ದವು. ಮಳೆಯಾಗಿದ್ದರಿಂದ ರಸ್ತೆಯ ಮೇಲೆ ನೀರು ನಿಂತುಕೊಂಡಿದ್ದು, ನೀರಿನ ಮೇಲೆ ಕಾರು ಹಾದು ಹೋಗಿವೆ. ಈ ವೇಳೆ ನೀರು ಹಿಂದಿನ ಕಾರಿಗೆ ಚಿಮ್ಮಿದ ಪರಿಣಾಮ ಚಾಲಕನಿಗೆ ರಸ್ತೆ ಕಾಣದಂತಾಗಿ, ಆತ ಮುಂದೆ ತೆರಳುತ್ತಿದ್ದ ಕಾರಿಗೆ ಡಿಕ್ಕಿಪಡಿಸಿದ್ದಾನೆ. ಎರಡೂ ಕಾರುಗಳಲ್ಲಿದ್ದ ಮೂವರಿಗೆ ಗಾಯಗಳಾಗಿವೆ.

ಗಾಯಾಳುಗಳನ್ನು ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಬಸವಂತಪ್ಪ ಹಾಗೂ ಸ್ಥಳೀಯರು ರಕ್ಷಣೆ ಮಾಡಿ ಆಸ್ಪತ್ರೆಗೆ ರವಾನೆ ಮಾಡಿದ್ದಾರೆ. ಅಪಘಾತದಿಂದ ಒಂದು ಕಾರಿನ ಮುಂಭಾಗ ಜಖಂಗೊಂಡಿದೆ. ಘಟನಾ ಸ್ಥಳಕ್ಕೆ ದಾವಣಗೆರೆ ಗ್ರಾಮಾಂತರ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

## ಸೇವೆ ಅನನ್ಯ : ವೀರೇಶ್

**(1ನೇ ಪುಟದಿಂದ)** ಆಡಳಿತದೊಂದಿಗೆ ಪೌರ ಕಾರ್ಮಿಕರು ಸಲ್ಲಿಸುತ್ತಿರುವ ಸೇವೆ ಕೂಡ ಅಮೋಘವಾದುದು. ಕೋವಿಡ್ ಸಂಕಷ್ಟದ ಪರಿಸ್ಥಿತಿಯಲ್ಲೂ ಸಹ ನಿತ್ಯ ಸ್ವಚ್ಛತಾ ಕಾರ್ಯದಲ್ಲಿ ತೊಡಗಿ, ಜನರ ಆರೋಗ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಹೇಳಿದರು.

ಕಿವಿ, ಮೂಗು, ಗಂಟಲು ರೋಗ ತಜ್ಞ ಡಾ. ಎ.ಎಂ. ಶಿವಕುಮಾರ್ ಪೌರ ಕಾರ್ಮಿಕರ ಸೇವೆಯನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು.

ದಾವಣಗೆರೆ ಕ್ಯಾನ್ಸರ್ ಫೌಂಡೇಶನ್ ರಾಯಭಾರಿಗಳೂ, ಕಲಾವಿದರೂ ಆದ ಆರ್.ಟಿ. ಅರುಣ್ ಕುಮಾರ್ ಅವರು, ತಮ್ಮ ಹಾಸ್ಯ ಪ್ರತಿಭೆಯನ್ನು ಹೊರ ಸೂಸುವ ಮೂಲಕ ಸಭಿಕರನ್ನು ರಂಜಿಸಿದರು.

ಸಹಾಯಕ ನಿರ್ದೇಶಕ ಡಾ. ಸಂತೋಷ್, ನಾಟಕ ಅಕಾಡೆಮಿ ಸದಸ್ಯ ರವೀಂದ್ರ ಹೆಚ್. ಅರಳಗುಪ್ಪಿ, ರಂಗ ನಿರ್ದೇಶಕ ಎಸ್.ಎಸ್. ಸಿದ್ಧರಾಜು ಹಾಗೂ ಪಾಲಿಕೆ ಸಿಬ್ಬಂದಿ ಹಾಜರಿದ್ದರು.

ಇದೇ ವೇಳೆ ಆಯ್ದ ಪೌರ ಕಾರ್ಮಿಕರಿಗೆ ಸ್ವಚ್ಛ ಭಾರತ ಮಿಷನ್ ನಿಂದ ಗೌರವ ಪ್ರಮಾಣ ಪತ್ರವನ್ನು ನೀಡಲಾಯಿತು.

ವೇದಿಕೆ ಕಾರ್ಯಕ್ರಮದ ನಂತರ ಪ್ರಸ್ತುತ ನಡೆಯುತ್ತಿರುವ ಸಾಮಾಜಿಕ, ರಾಜಕೀಯ ವಸ್ತುಸ್ಥಿತಿ ಬಿಂಬಿಸುವ ವರಕವಿ ದ.ರಾ. ಬೇಂದ್ರ ವಿರಚಿತ 'ಸಾಯೋ ಆಟ' ಹಾಸ್ಯ ಪ್ರಧಾನ ನಾಟಕವನ್ನು ರಂಗಕರ್ಮಿ ಎಸ್.ಎಸ್. ಸಿದ್ಧರಾಜು ಮತ್ತು ತಂಡದವರು ಮನೋಜ್ಞವಾಗಿ ಪ್ರದರ್ಶಿಸಿದರು.

## ಜನ ಸೇರುವಂತಿಲ್ಲ

**(1ನೇ ಪುಟದಿಂದ)** ಪಡೆದಿರುವುದನ್ನು ಕಡ್ಡಾಯಗೊಳಿಸಬೇಕು. ನಾಡಹಬ್ಬ ದಸರಾ ಆಚರಣೆಯಲ್ಲಿ ಸಾಮಾಜಿಕ ಅಂತರವಿಲ್ಲದೆ ನಡೆಸಲಾಗುವ ಕಾರ್ಯಕ್ರಮಗಳನ್ನು ನಿಷೇಧಿಸಲಾಗುವುದು. ಹಬ್ಬ ಹರಿದಿನಗಳಲ್ಲಿ ಸಮಾಜ ದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಾಮರಸ್ಯಗಳು ಉಂಟಾಗಲು ಪೂರಕವಾ ಗಿರುವುದರಿಂದ ದಸರಾ ಹಬ್ಬವನ್ನು ಅದೇ ರೀತಿ ಆಚರಿಸುವ ಮೂಲಕ ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಬಾರದಂತೆ ಕಾಪಾಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.

## ಅನಿಲ ಬೆಲೆಯೂ ಏರಿಕೆ

**(1ನೇ ಪುಟದಿಂದ)** ಬಾರಿ ಅಡುಗೆ ಅನಿಲ ಸಿಲಿಂಡರ್ ಬೆಲೆ ಹೆಚ್ಚಿಸಲಾಗಿದೆ.

ಈ ನಡುವೆಯೇ, ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 30 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು ಲೀಟರ್‌ಗೆ 35 ಪೈಸೆ ಹೆಚ್ಚಿಸಲಾಗಿದೆ. ಇತ್ತೀಚಿನ ವಾರಗಳಲ್ಲಿ ಅತಿ ಹೆಚ್ಚಿನ ಮಟ್ಟದಲ್ಲಿ ತೈಲ ಬೆಲೆ ಏರಿಕೆ ಮಾಡಲಾಗಿದೆ. ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏಳು ವರ್ಷಗಳಲ್ಲೇ ಅತಿ ಹೆಚ್ಚಿನ ಮಟ್ಟಕ್ಕೆ ತಲುಪಿದ ಬೆನ್ನಲ್ಲೇ ಈ ಏರಿಕೆಯಾಗುತ್ತಿದೆ.

## ಹಕ್ಕಿನ ಹೋರಾಟ

**ಹಕ್ಕಿಗಾಗಿ ವೈದ್ಯರ ಪ್ರತಿಭಟನೆ**

ನೋಡ
ಲಾಗುತ್ತಿಲ್ಲ ಈ
ಕಷ್ಟ
ವೈದ್ಯ
ವಿದ್ಯಾರ್ಥಿಗಳ ನರಳಾಟ
ತಮ್ಮ ಹಕ್ಕಿಗಾಗಿ ಹಗಲಿರುಳು
ನಡೆಸಿದ್ದಾರೆ ಹೋರಾಟ

ಹಾದಿ - ಬೀದಿಯಲ್ಲಿ ನಿಂತು
ಬಿಸಿಲು ಮಳೆ ಲೆಕ್ಕಿಸದೆ
ಕೈ ಮುಗಿದು ಶಾಂತಿಯಿಂದ
ಬೇಡುತ್ತಿರುವುದು ಬರೀ
ಹಣವಲ್ಲ, ಅದು ಪರಿಶ್ರಮದ
ಪ್ರತಿಫಲ
ಅವರು ದುಡಿದ ಸಂಬಳ

ಅನ್ನ, ನೀರು ಇಲ್ಲದೇ
ಸ್ವಯಂ ರಕ್ಷಣೆ ಕವಚ ಧರಿಸಿ
ಎಂಟು ತಾಸುಗಳ ದುಡಿತ
ಕೋವಿಡ್ ರೋಗಿಗಳ ಆರೈಕೆ
ಪ್ರಾಣ ಪಣಕಿಟ್ಟು ಶುಶ್ರೂಷೆ
ಜೀವ ರಕ್ಷಿಸಿದ ಕೈಗಳು
ಬಯಸುತ್ತಿರುವುದು
ದುಡಿಮೆಯ ವೇತನ

**- ಅನುಪಮ ವಿರೂಪಾಕ್ಷಪ್ಪ**
ದಾವಣಗೆರೆ

# ತಾಳ್ಮೆ ಪರೀಕ್ಷೆ ನಿಲ್ಲಿಸಿ, ಮೀಸಲಾತಿ ಹೆಚ್ಚಿಸಿ : ಸರ್ಕಾರಕ್ಕೆ ರಾಜನಹಳ್ಳಿ ಶ್ರೀ ಎಚ್ಚರಿಕೆ





ಮಲೇಬೆನ್ನೂರು, ಅ.6- ಎಸ್ಸಿ-ಎಸ್ಟಿ ಮೀಸಲಾತಿಯನ್ನು ಜನಸಂಖ್ಯೆಗನುಗುಣವಾಗಿ ಹೆಚ್ಚಿಸುವ ಸಂಬಂಧ ನ್ಯಾಯಮೂರ್ತಿ ಹೆಚ್. ಎನ್. ನಾಗಮೋಹನ್ ದಾಸ್ ಆಯೋಗ ವರದಿ ಸಲ್ಲಿಸಿ ವರ್ಷ ಕಳೆದಿದ್ದರೂ ರಾಜ್ಯ ಸರ್ಕಾರ ಇದುವರೆಗೂ ವರದಿ ಅನುಷ್ಠಾನ ಮಾಡುವುದಿರಲಿ, ಅಂಗೀಕಾರವನ್ನೇ ಮಾಡಿಲ್ಲ ಎಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ನ್ಯಾ. ನಾಗಮೋಹನ್ ದಾಸ್ ವರದಿ ಅನುಷ್ಠಾನ ಕುರಿತು ಸಮಾಜದ ಸಚಿವರು, ಸಂಸದರು, ಶಾಸಕರ ಸಮ್ಮುಖದಲ್ಲಿ ಸೋಮವಾರ ಜರುಗಿದ ಸಂವಾದ ಕಾರ್ಯಾಗಾರದ ನೇತೃತ್ವ ವಹಿಸಿ ಶ್ರೀಗಳು ಮಾತನಾಡಿದರು.

ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಹಾಲಿ ಮುಖ್ಯಮಂತ್ರಿಗಳು ಮೀಸಲಾತಿ ಹೆಚ್ಚಿಸುವ ಭರವಸೆ ನೀಡಿದ್ದರೂ, ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆ. ತಾಳ್ಮೆ ಪರೀಕ್ಷೆ ಮಾಡುವುದನ್ನು ನಿಲ್ಲಿಸಲಿ. ನಮ್ಮ ತಾಳ್ಮೆಯನ್ನು ದೌರ್ಬಲ್ಯ ಎಂದು ನೀವು ತಿಳಿದುಕೊಂಡಿದ್ದರೆ, ಸಮಯ ಬಂದಾಗ ನಮ್ಮ ಶಕ್ತಿ ಏನೆಂದು ತೋರಿಸುತ್ತೇವೆ ಎಂದು ಸ್ವಾಮೀಜಿ ಬಿಜೆಪಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಇದೇ ದಿನಾಂಕ 20 ರಂದು ವಾಲ್ಮೀಕಿ ಜಯಂತಿ ಇದ್ದು, ಅಷ್ಟರೊಳಗೆ ವರದಿ ಅಂಗೀಕಾರ ಮಾಡಿ, ಅನುಷ್ಠಾನಗೊಳಿಸುವ ನಿರ್ಧಾರ ಕೈಗೊಳ್ಳಿ. ಅದಕ್ಕೂ ಮೊದಲು ನ್ಯಾ. ಸುಭಾಷ್ ನೇತೃತ್ವದ ತ್ರಿಸದಸ್ಯ ಸಮಿತಿಯಿಂದ ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳ ವಿಷಯವನ್ನು ವಾಪಸ್ ಪಡೆಯಿರಿ ಎಂದು ಸ್ವಾಮೀಜಿ ಸರ್ಕಾರಕ್ಕೆ ಆಗ್ರಹಪಡಿಸಿದರು. ಇದೇ ರೀತಿ ನಮ್ಮನ್ನು ಎಲ್ಲಾ ವಿಚಾರದಲ್ಲೂ ನಿರ್ಲಕ್ಷ್ಯ ಮಾಡಿದರೆ, ನಾವು ನಮ್ಮ ನಿರ್ಧಾರವನ್ನು ವಾಲ್ಮೀಕಿ ಜಯಂತಿ ನಂತರ ಪ್ರಕಟಿಸುತ್ತೇವೆ ಎಂದು ಸ್ವಾಮೀಜಿ ಸರ್ಕಾರಕ್ಕೆ ಸಂದೇಶ ನೀಡಿದರು.


ಇದಕ್ಕೂ ಮುನ್ನ ಬಳ್ಳಾರಿ ಸಂಸದ ಅರಸೀಕೆರೆ ದೇವೇಂದ್ರಪ್ಪ, ಶಾಸಕರುಗಳಾದ ಜಗಳೂರಿನ ಎಸ್.ವಿ. ರಾಮಚಂದ್ರ, ಸಿರಗುಪ್ಪದ ಸೋಮಲಿಂಗಪ್ಪ, ಮಸ್ಕಿಯ ಬಸವನಗೌಡ ತುರವಿನಹಾಳ್, ರಾಯಚೂರು ಗ್ರಾಮೀಣದ ಬಸವನಗೌಡ ದದ್ದಲ್, ಹೆಚ್.ಡಿ. ಕೋಟೆಯ ಅನಿಲ್ ಚಿಕ್ಕಮಾದು, ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಮೈಸೂರಿನ ಅಪ್ಪಣ್ಣ ಮಾತನಾಡಿ, ಮೀಸಲಾತಿ ಹೆಚ್ಚಳ ವಿಚಾರದಲ್ಲಿ ಸರ್ಕಾರ ಕೂಡಲೇ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು. ಈ ನಿಟ್ಟಿನಲ್ಲಿ ಯಾವುದೇ ರಾಜೀ ಇಲ್ಲ. ಸ್ವಾಮೀಜಿ ಅವರ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆಂದು ಪ್ರಕಟಿಸಿದರು.

ಸಮಾಜದ ಮುಖಂಡ ಹೊದಿಗೆರೆ ರಮೇಶ್ ಮಾತನಾಡಿ, ಮೀಸಲಾತಿಗಾಗಿ ಹೋರಾಟ, ಪಾದಯಾತ್ರೆ ಮಾಡದ ಜನರಿಗೆ ಶೇ. 10 ಮೀಸಲಾತಿ ನೀಡಿರುವ ಸರ್ಕಾರ, ಮೀಸಲಾತಿಗಾಗಿ ಹೋರಾಟ ಮಾಡಿದವರನ್ನು ನಿರ್ಲಕ್ಷ್ಯ ಮಾಡುತ್ತಿದೆ ಎಂದು ದೂರಿದರು.

ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯ ಜಿ.ಟಿ. ಚಂದ್ರಶೇಖರಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಮೀಸಲಾತಿ ಕೇಳುವವರ ಬೇಡಿಕೆಯೇ ಬೇರೆ, ಎಸ್ಸಿ-ಎಸ್ಟಿ ಬೇಡಿಕೆಯೇ ಬೇರೆಯಾಗಿದ್ದು, ಸರ್ಕಾರ ಅದಕ್ಕೆ ನಮ್ಮನ್ನು ಜೋಡಣೆ ಮಾಡಬಾರದು. ಈ ವಿಚಾರದಲ್ಲಿ ಸರ್ಕಾರದ ಇಚ್ಛಾಶಕ್ತಿ ಪ್ರದರ್ಶಿಸಬೇಕೆಂದು ಒತ್ತಾಯಿಸಿದರು.

ಸಮಾಜ ಕಲ್ಯಾಣ ಇಲಾಖೆಯ ನಿವೃತ್ತ ಅಪರ ನಿರ್ದೇಶಕ ಕೆ.ಎಸ್. ಮೃತ್ಯುಂಜಯಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖಂಡರಾದ ಟಿ. ಈಶ್ವರ್, ಹರ್ತಿಕೋಟೆ ವೀರೇಂದ್ರ ಸಿಂಹ, ಗುರುಪೀಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ಧರ್ಮದರ್ಶಿಗಳಾದ ಡಾ. ಜಿ. ರಂಗಯ್ಯ, ಶಾಂತಲಾ ರಾಜಣ್ಣ, ಸುರಪುರ ಶಾಂತ, ನಲುವಾಗಲು ನಾಗರಾಜಪ್ಪ, ಕೋಲಾರದ ವೆಂಕಟರಮಣ, ಹರಿಹರದ ಕೆ.ಬಿ. ಮಂಜುನಾಥ್, ಶಿವಮೊಗ್ಗದ ಬಸವರಾಜಪ್ಪ, ಭರತ್ ಮಗದೂರು ಇನ್ನಿತರರು ವೇದಿಕೆಯಲ್ಲಿದ್ದರು.

## ತುಳಜಾ ಭವಾನಿ ದೇವಸ್ಥಾನದಲ್ಲಿ ದಸರಾ




ಕೆಟಿಜೆ ನಗರ 3ನೇ ಮುಖ್ಯ ರಸ್ತೆಯ 11 ಮತ್ತು 12ನೇ ಕ್ರಾಸ್‌ನಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ನಾಡ ಹಬ್ಬ ದಸರಾ ಮಹೋತ್ಸವವು ಇಂದಿನಿಂದ ದಿನಾಂಕ 13ರವರೆಗೆ ಏರ್ಪಾಡಾಗಿದೆ.

ಇಂದು ಬೆಳಿಗ್ಗೆ 9ಕ್ಕೆ ಹರಿಹರದಲ್ಲಿ ಗಂಗಾಪೂಜೆ ನಡೆಯಲಿದ್ದು, ಸಂಜೆ 7 ಗಂಟೆಗೆ ಘಟ ಸ್ಥಾಪನೆ, ದೀಪ ಹಾಕುವ ಕಾರ್ಯಕ್ರಮ ಆಯೋಜನೆಗೊಂಡಿದೆ. 9 ದಿನಗಳ ಕಾಲ ದೇವಿಗೆ ಅಲಂಕಾರ ಮಾಡಲಾಗುತ್ತದೆ.

ದಿನಾಂಕ 13ರ ಬುಧವಾರ ದುರ್ಗಾಷ್ಟಮಿಯಂದು ಚಂಡಿಕಾ ಹೋಮ ಮತ್ತು ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಹೋಮ ಮತ್ತು ವಿಶೇಷ ಅಲಂಕಾರಗಳ ಸೇವೆಯಲ್ಲಿ ಭಾಗವಹಿಸಬಹುದು.

## ಹನುಮಂತ ದೇವರಿಗೆ ವಿಶೇಷ ಅಲಂಕಾರ



ಕುಂಬಳೂರು, ಅ.6- ಗ್ರಾಮದ ಆರಾಧ್ಯ ದೈವ ಶ್ರೀ ಹನುಮಂತ ದೇವರಿಗೆ ಮಹಾಲಯ ಅಮಾವಾಸ್ಯೆಯಂದು ವಿಶೇಷ ಅಲಂಕಾರ ಮಾಡಲಾಗಿತ್ತು.

## ನಿರಂತರ ಮಳೆಯಿಂದ ಜನಜೀವನ ಅಸ್ತವ್ಯಸ್ತ




**ಹರಿಹರ ತಾಲ್ಲೂಕು**

ಹರಿಹರ, ಅ.6- ಇಂದು ಸತತವಾಗಿ ಸುರಿದ ಮಳೆಯಿಂದಾಗಿ ಹರಿಹರ ನಗರ ಹಾಗೂ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಜನ ಜೀವನ ಅಸ್ತವ್ಯಸ್ತವಾಗಿದೆ.

ತಾಲ್ಲೂಕಿನ ಚಿಕ್ಕಬಿದರಿ, ಸಾರಥಿ, ದೀಟೂರು, ಕೊಂಡಜ್ಜಿ, ಕುರುಬರಹಳ್ಳಿ, ಗುತ್ತೂರು, ಹಲಸಬಾಳು, ಹನಗವಾಡಿ, ಬೆಳ್ಳೂಡಿ, ರಾಮತೀರ್ಥ, ಭಾನುವಳ್ಳಿ, ಸೇರಿದಂತೆ ಹಲವು ಗ್ರಾಮಗಳಲ್ಲಿ ಬೆಳಗ್ಗೆ 12 ಗಂಟೆಗೆ ಪ್ರಾರಂಭವಾದ ಮಳೆಯು ಎಡೆಬಿಡದೆ ಸುರಿದ ಪರಿಣಾಮ ಬೆಳೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗಿದೆ. ಮತ್ತು ನಗರ ಪ್ರದೇಶದ ಹಲವು ಬಡಾವಣೆಗಳಲ್ಲಿ ಮನೆಗಳಿಗೆ ಹಾನಿ ಸಂಭವಿಸಿದೆ. ಗಾಂಧಿ ನಗರ, ಬಸ್ ನಿಲ್ದಾಣ ಮತ್ತು ಕೆಲವು ಬಡಾವಣೆಗಳಲ್ಲಿ ಚರಂಡಿ ನೀರು ಮನೆಗಳಿಗೆ ನುಗ್ಗಿದ್ದ ರಿಂದ ನೀರನ್ನು ಹೊರಗೆ ಹಾಕಲು ಹರ ಸಾಹಸ ಪಟ್ಟರು.

ಈ ವೇಳೆ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಹಲವು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಯಾವ ಯಾವ ಗ್ರಾಮಗಳಲ್ಲಿ ಎಷ್ಟು ಪ್ರಮಾಣದಲ್ಲಿ ಬೆಳೆ ಹಾಗೂ ಮನೆಗಳಿಗೆ ಹಾನಿ ಸಂಭವಿಸಿದೆ ಎಂಬುದನ್ನು ಗ್ರಾಮ ಲೆಕ್ಕಾಧಿಕಾರಿಗಳು, ಪಿಡಿಓಗಳು ಸರ್ವೆ ಮಾಡಿ ವರದಿ ಕೊಟ್ಟ ನಂತರದಲ್ಲಿ ಹಾನಿ ಕುರಿತು ನಿಖರವಾಗಿ ಹೇಳಬಹುದು. ಅದೇ ರೀತಿ ನಗರಸಭೆ ಅಧಿಕಾರಿಗಳು ಹಾನಿ ಕುರಿತು ವರದಿ ಸಲ್ಲಿಸಿದ ನಂತರ ಮಾಹಿತಿ ನೀಡಲಾಗುವುದು ಎಂದರು.

## ಕಡೇನಂದಿಹಳ್ಳಿಯಲ್ಲಿ ಇಂದಿನಿಂದ ರಂಭಾಪುರಿ ಜಗದ್ಗುರುಗಳವರ ದಸರಾ ಧರ್ಮ ಸಮಾರಂಭ



ರಂಭಾಪುರಿ ಪೀಠ (ಬಾಳೆಹೊನ್ನೂರು) – ಅ.6- ಬಾಳೆಹೊನ್ನೂರಿನ ಶ್ರೀಮದ್ ರಂಭಾಪುರಿ ಪೀಠದ ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ 30ನೇ ವರ್ಷದ ಶರನ್ನವರಾತ್ರಿ ದಸರಾ ಧರ್ಮ ಸಮಾರಂಭವು ನಾಳೆ ದಿನಾಂಕ 7ರಿಂದ ಇದೇ ದಿನಾಂಕ 15ರ ವರೆಗೆ ಶಿಕಾರಿಪುರ ತಾಲ್ಲೂಕಿನ ಕಡೇನಂದಿಹಳ್ಳಿ ಶ್ರೀ ಮಳೆಮಲ್ಲೇಶ್ವರ ಕ್ಷೇತ್ರದ ಶ್ರೀ ಗುರು ರೇವಣಸಿದ್ಧೇಶ್ವರ ಪುಣ್ಯಾಶ್ರಮದಲ್ಲಿ ನಡೆಯಲಿದೆ.

ಶ್ರೀಮದ್ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಕಡೇನಂದಿಹಳ್ಳಿ ಪುಣ್ಯಾಶ್ರಮದ ರೇವಣಸಿದ್ಧೇಶ್ವರ ಶಿವಾಚಾರ್ಯರ ನೇತೃತ್ವದಲ್ಲಿ ನಡೆಯುವುದು.

ನಾಳೆ ದಿನಾಂಕ 7ರ ಗುರುವಾರ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಮಾರಂಭವನ್ನು ಉದ್ಘಾಟಿಸುವರು.

**ಪ್ರಶಸ್ತಿ ಪ್ರದಾನ:** ಈ ವರ್ಷದ 'ರಂಭಾಪುರಿ ಯುವ ಸಿರಿ' ಪ್ರಶಸ್ತಿಯನ್ನು ಕೋಣಂದೂರಿನ ಕೆ.ಆರ್.ಪ್ರಕಾಶ್ ಅವರಿಗೆ, 'ಸಾಹಿತ್ಯ ಸಿರಿ' ಪ್ರಶಸ್ತಿಯನ್ನು ಲಕ್ಷ್ಮೇಶ್ವರದ ಡಾ. ಜಯಶ್ರೀ ಮಲ್ಲಿಕಾರ್ಜುನ ಹೊಸಮನಿ ಅವರಿಗೆ, 'ವೀರಶೈವ ಸಿರಿ' ಪ್ರಶಸ್ತಿಯನ್ನು ಶಿವಮೊಗ್ಗ ಲೋಕಸಭಾ ಸದಸ್ಯ ಬಿ.ವೈ. ರಾಘವೇಂದ್ರ ಅವರಿಗೆ, 'ಶಿವಾಚಾರ್ಯ ರತ್ನ' ಪ್ರಶಸ್ತಿಯನ್ನು ಬೀದರ ಜಿಲ್ಲೆ ಹುಡುಗಿ ಹಿರೇಮಠದ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳಿಗೆ ಹಾಗೂ 'ಸಾಧನ ಸಿರಿ' ಪ್ರಶಸ್ತಿಯನ್ನು ಕಡೇನಂದಿಹಳ್ಳಿ-ದುಗ್ಲಿ ಕ್ಷೇತ್ರದ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ಪ್ರದಾನ ಮಾಡಲಾಗುವುದು.

ದಿನಾಂಕ 15ರಂದು ಶ್ರೀ ರಂಭಾಪುರಿ ಜಗದ್ಗುರುಗಳು ಶಮಿ ಸೀಮೋಲ್ಲಂಘನ ಮಾಡಿ ಶಮಿ ಪೂಜೆ ನೆರವೇರಿಸಿದ ನಂತರ ಸಭಾ ಮಂಟಪಕ್ಕೆ ಆಗಮಿಸಿ ಶುಭಾಶೀರ್ವಾದ ಶಾಂತಿ ಸಂದೇಶ ಅನುಗ್ರಹಿಸುವರು.

## ಲೋಕೇಶ್ ಅಗಸನಕಟ್ಟೆ ಅವರ ಕಾದಂಬರಿ ಬಿಡುಗಡೆ



ಚಿತ್ರದುರ್ಗ, ಅ.6- ಗೆಳೆಯರ ಬಳಗ (ಚಿತ್ರದುರ್ಗ) ಮತ್ತು ಅಹರ್ನಿಷಿ ಪ್ರಕಾಶನ (ಶಿವಮೊಗ್ಗ) ಇವರ ಸಂಯುಕ್ತಾಶ್ರಯದಲ್ಲಿ ಇದೇ ದಿನಾಂಕ 9 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ನಗರದ ತ.ರಾ.ಸು. ರಂಗಮಂದಿರದಲ್ಲಿ ಗಾಂಧಿ, ಅಂಬೇಡ್ಕರರ ಭಾರತದ ಕಥನಾತ್ಮಕ ಕಾದಂಬರಿ 'ವೈಷ್ಣವ ಜನತೋ' ಲೋಕಾರ್ಪಣೆಗೊಳ್ಳಲಿದೆ.

ತರಳಬಾಳು ಜಗದ್ಗುರು ಶಾಖಾ ಮಠ ಸಾಣೇಹಳ್ಳಿಯ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸುವರು. ಕವಿ ಬೆಂಗಳೂರಿನ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ಹರಿಹರದ ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್ ನ ಟ್ರಸ್ಟಿ ರುದ್ರಪ್ಪ ಹನಗವಾಡಿ ಪುಸ್ತಕ ಬಿಡುಗಡೆ ಮಾಡಲಿದ್ದು, ನಾಡಿನ ಹಿರಿಯ ಕವಿ ಡಾ. ಬಂಜಗೆರೆ ಜಯಪ್ರಕಾಶ್ ಕೃತಿ ಕುರಿತು ಮಾತನಾಡಲಿದ್ದಾರೆ.

## ಸೇತುವೆ ಮೇಲೆ ಹರಿವ ನೀರಿನಲ್ಲಿ ಲಾರಿ ಪಲ್ಟಿ



ದಾವಣಗೆರೆ, ಅ.6- ಸೇತುವೆಯ ಮೇಲೆ ಹರಿಯುವ ನೀರಿನಲ್ಲಿ ಚಾಲಕನೊಬ್ಬ ಹುಚ್ಚಾಟ ಪ್ರದರ್ಶನ ಮಾಡಿದ ಹಿನ್ನೆಲೆಯಲ್ಲಿ ಲಾರಿಯೊಂದು ಪಲ್ಟಿಯಾಗಿರುವ ಘಟನೆ ಸಂತೆಬೆನ್ನೂರು ಪೊಲೀಸ್ ಠಾಣೆ ವ್ಯಾಪ್ತಿಯ ಚನ್ನಗಿರಿ ತಾಲ್ಲೂಕಿನ ಚಿರಡೋಣಿ ಹಾಗೂ ತ್ಯಾವಣಿಗಿ ರಸ್ತೆಯಲ್ಲಿ ಸಂಭವಿಸಿದೆ.

ಸೂಳೆಕೆರೆ ತುಂಬಿ ಕೋಡಿ ಬಿದ್ದ ಪರಿಣಾಮ ತ್ಯಾವಣಗಿ-ಚಿರಡೋಣಿ ಮಧ್ಯದ ಹಳ್ಳ ತುಂಬಿ ಹರಿಯುತ್ತಿದ್ದು, ಸೇತುವೆ ಮೇಲೆಯೇ ನೀರು ಹರಿಯುತ್ತಿದೆ. ಅಲ್ಲದೇ, ರಸ್ತೆ ಸಂಪರ್ಕ ಕೂಡ ಕಡಿತವಾಗಿದೆ. ಆದರೆ, ರಸ್ತೆ ಮೇಲೆ ನೀರು ಹರಿಯುತ್ತಿರುವಾಗಲೂ ಚಾಲಕ ಬೇಜವಾಬ್ದಾರಿಯಿಂದ ಲಾರಿ ಚಲಾಯಿಸಿ ಕೊಂಡು ಬಂದಿದ್ದರಿಂದ ನೀರಿನ ರಭಸಕ್ಕೆ ಲಾರಿ ಮುಂದಕ್ಕೆ ಹೋಗಲಾಗದೆ ಅಲ್ಲಿಯೇ ಪಲ್ಟಿಯಾಗಿದೆ.

ಭಾರೀ ಅನಾಹುತ ತಪ್ಪಿದ್ದು, ಘಟನೆಯಲ್ಲಿ ಲಾರಿ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಲಾರಿ ಪಡಿತರ ರಾಗಿಯನ್ನು ಹೊತ್ತು ತ್ಯಾವಣಿಗಿ ಮಾರ್ಗವಾಗಿ ಬೆಂಗಳೂರಿಗೆ ತೆರಳುತ್ತಿತ್ತು.

## ಫ್ರಾನ್ಸ್ ಚರ್ಚ್‌ಗಳಲ್ಲಿ 3 ಲಕ್ಷ ಮಕ್ಕಳಿಗೆ ಲೈಂಗಿಕ ಶೋಷಣೆ

**ಘಟನೆಗಳಿಂದ ನಾಚಿಕೆಯಾಗಿದೆ ಎಂದ ಪೋಪ್**

ವ್ಯಾಟಿಕಾನ್ ಸಿಟಿ, ಅ. 6 -ಫ್ರಾನ್ಸ್‌ನ ಚರ್ಚ್‌ಗಳಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಮಕ್ಕಳ ಮೇಲೆ ಲೈಂಗಿಕ ಶೋಷಣೆ ನಡೆದಿರುವುದಕ್ಕೆ ಪೋಪ್ ಫ್ರಾನ್ಸಿಸ್ ಅವರು ತಮಗೆ ಹಾಗೂ ರೋಮನ್ ಕ್ಯಾಥೊಲಿಕ್ ಚರ್ಚ್‌ಗೆ ನಾಚಿಕೆಯಾಗಿದೆ ಎಂದು ಹೇಳಿದ್ದಾರೆ.

1950ರ ನಂತರ ಫ್ರಾನ್ಸ್‌ನ 3,30,000 ಮಕ್ಕಳನ್ನು ಚರ್ಚ್‌ನ ಧಾರ್ಮಿಕ ಅಧಿಕಾರಿಗಳು ಲೈಂಗಿಕ ಶೋಷಣೆಗೆ ಒಳಪಡಿಸಿದ್ದರು ಎಂದು ವರದಿಗಳು ತಿಳಿಸಿವೆ.

ಸಂತ್ರಸ್ತರ ಮಾನಸಿಕ ಕ್ಷೋಭೆಗೆ ವಿಷಾದ ವ್ಯಕ್ತಪಡಿಸುವುದಾಗಿ ಹೇಳಿರುವ ಪೋಪ್ ಫ್ರಾನ್ಸಿಸ್, ಇದು ನನಗೆ ಹಾಗೂ ಚರ್ಚ್‌ಗೆ ನಾಚಿಕೆ ತಂದಿದೆ. ಚರ್ಚ್ ಇಷ್ಟು ಕಾಲ ಕಳವಳಗಳಿಗೆ ಪ್ರಾಮುಖ್ಯತೆ ನೀಡಲು ವಿಫಲವಾಗಿತ್ತು ಎಂದಿದ್ದಾರೆ.

ಈ ರೀತಿಯ ಘಟನೆಗಳು ಮತ್ತೆ ನಡೆಯದಂತೆ ಎಲ್ಲ ಬಿಷಪ್‌ಗಳು ಹಾಗೂ ಧಾರ್ಮಿಕ ಮುಖಂಡರು ಕ್ರಮ ತೆಗೆದುಕೊಳ್ಳಬೇಕು ಎಂದೂ ಅವರು ಹೇಳಿದ್ದಾರೆ.

ಕ್ಯಾಥೊಲಿಕ್ ಚರ್ಚ್‌ನ 3,000 ಪಾದ್ರಿಗಳು ಹಾಗೂ ಅಪರಿಚಿತ ವ್ಯಕ್ತಿಗಳು ಮಕ್ಕಳ ಮೇಲೆ ಲೈಂಗಿಕ ಶೋಷಣೆ ನಡೆಸಿದ್ದರು. ಈ ಬಗ್ಗೆ ಫ್ರಾನ್ಸ್ ವಿಶ್ವದಲ್ಲೇ ಮೊದಲ ಬಾರಿಗೆ ಲೆಕ್ಕ ಪರಿಶೋಧನೆ ನಡೆಸಿತ್ತು.

ಸ್ವತಂತ್ರ ಆಯೋಗದ ಮೂಲಕ ವಿಚಾರಣೆ ನಡೆಸಲಾಗಿತ್ತು. ನಂತರ 2,500 ಪುಟಗಳ ಸುದೀರ್ಘ ವರದಿ ಪ್ರಕಟಿಸಲಾಗಿತ್ತು.

ಈ ವರದಿಯ ಪ್ರಕಾರ 3.30 ಲಕ್ಷ ಮಕ್ಕಳನ್ನು ಶೋಷಣೆಗೆ ಒಳಪಡಿಸಲಾಗಿತ್ತು. ಇವರೆಲ್ಲ ಪಾದ್ರಿ ಮತ್ತಿತರೆ ಧಾರ್ಮಿಕ ಮುಖಂಡರು 2.16 ಲಕ್ಷ ಮಕ್ಕಳನ್ನು ಶೋಷಣೆಗೆ ಒಳಪಡಿಸಿದ್ದರು. ಉಳಿದವರನ್ನು ಸ್ಕೌಟ್ ನಾಯಕರು ಹಾಗೂ ಕ್ಯಾಂಪ್ ಕೌನ್ಸೆಲರ್‌ಗಳು ಶೋಷಣೆಗೆ ಒಳಪಡಿಸಿದ್ದರು.



## ಶ್ರೀ ಸಾಯಿಬಾಬಾರ 103ನೇ ಪುಣ್ಯಾರಾಧನೆ

ಶ್ರೀ ಸದ್ಗುರು ಶ್ರೀ ಸಾಯಿಬಾಬಾರವರ 103ನೇ ಪುಣ್ಯಾರಾಧನೆ ಮಹೋತ್ಸವವು ದಾವಣಗೆರೆ ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಶ್ರೀ ಸಾಯಿಬಾಬಾ ಮಂದಿರದಲ್ಲಿ ಬುಧವಾರ ಆರಂಭಗೊಂಡಿದ್ದು, ಇದೇ ದಿನಾಂಕ 15ರವರೆಗೆ ನಡೆಯಲಿದೆ. ಜಡೇಸಿದ್ದೇಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ದೀಪ ಬೆಳಗಿಸುವುದರ ಮೂಲಕ ಪುಣ್ಯಾರಾಧನಾ ಮಹೋತ್ಸವಕ್ಕೆ ಬುಧವಾರ ಸಂಜೆ ಚಾಲನೆ ನೀಡಿದರು. ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ಸೇರಿದಂತೆ, ಅನೇಕ ಗಣ್ಯರು ಉಪಸ್ಥಿತರಿದ್ದರು.

## ಬಡ್ತಿ ಮೀಸಲಾತಿ : ಆಸ್ಪತ್ರೆಯಿಂದಲೇ ವಾದ ಮಂಡಿಸಿದ ಹಿರಿಯ ವಕೀಲ

ನವದೆಹಲಿ, ಅ. 6 – ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಉದ್ಯೋಗಿಗಳಿಗೆ ಬಡ್ತಿ ಮೀಸಲಾತಿ ಕಲ್ಪಿಸುವ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುವಾಗ ಹಿರಿಯ ವಕೀಲರೊಬ್ಬರು ಆಸ್ಪತ್ರೆಯಿಂದಲೇ ವಾದ ಮಂಡಿಸಿದ ಘಟನೆ ನಡೆದಿದೆ.

ಆನ್‌ಲೈನ್ ಮೂಲಕ ನಡೆದ ವಿಚಾರಣೆಯ ಆರಂಭದಲ್ಲಿ ಪೀಠದ ಮುಖ್ಯಸ್ಥರಾಗಿದ್ದ ನ್ಯಾಯಮೂರ್ತಿ ಎಲ್. ನಾಗೇಶ್ವರ ರಾವ್ ಅವರು ಹಿರಿಯ ವಕೀಲರ ಆರೋಗ್ಯದ ಕುರಿತು ವಿಚಾರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ವಕೀಲರು, ನಿಮ್ಮ ಕಳಕಳಿಗೆ ಕೃತಜ್ಞತೆ. ನಾನು ಚೆನ್ನಾಗಿದ್ದೇನೆ. ಆಸ್ಪತ್ರೆಗೆ ಬಂದ ಕಾರಣ ಆರೋಗ್ಯ ಸಮಸ್ಯೆಗೆ ಕಾರಣ ಏನು ಎಂಬುದು ಗೊತ್ತಾಗಿದೆ ಎಂದು ಹೇಳಿದರು. ನಂತರ ಅವರು ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವಾದ ಮಂಡಿಸಿದರು.

# ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಸಂಘಟಿತರಾಗಿ

## ರಾಣೇಬೆನ್ನೂರು : ಗಂಗಾಮತ ಸಮಾಜದ ಸಭೆಯಲ್ಲಿ ಹಿರಿಯ ಮುಖಂಡ ಹನುಮಂತಪ್ಪ ಕುರುವತ್ತಿ

ರಾಣೇಬೆನ್ನೂರು, ಅ.6- ಸಂವಿಧಾನ ಬದ್ಧವಾದ ನಮ್ಮ ಹಕ್ಕನ್ನು ಪಡೆದುಕೊಳ್ಳಲು ಸಂಘಟಿತರಾಗುವುದು ಇಂದು ಅನಿವಾರ್ಯವಾಗಿದೆ. ನಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಮುಂದಿನ ಪೀಳಿಗೆಯ ಶ್ರೇಯಸ್ಸಿಗಾಗಿ ಎಲ್ಲರೂ ಒಟ್ಟಾಗಿ ಶ್ರಮಿಸೋಣ ಎಂದು ಗಂಗಾಮತ ಸಮಾಜದ ಮುಖಂಡ ಹನುಮಂತಪ್ಪ ಕುರುವತ್ತಿ ಹೇಳಿದರು.




ನಗರದ ಶ್ರೀ ಗಂಗಾ ಸಹಕಾರಿ ಸಂಘದ ಸಭಾ ಭವನದಲ್ಲಿ ನಡೆದ ಗಂಗಾಮತ ಸಮಾಜದ ಬಲವರ್ಧನೆಗೆ ವಿವಿಧ ಸಂಘಟನೆಗಳ ಪದಾಧಿಕಾರಿಗಳ ಆಯ್ಕೆ ಕುರಿತಾದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜಕೀಯವಾಗಿ ಯಾವುದೇ ಪಕ್ಷದಲ್ಲಿ ಗುರುತಿಸಿಕೊಂಡಿದ್ದರೂ ಸಹ ಸಮಾಜದ ಸಂಘಟನೆಯ ವಿಚಾರ ಬಂದಾಗ ಪಕ್ಷ ಭೇದ ಮರೆತು ಒಂದಾಗಬೇಕು ಎಂದು ಕರೆ ನೀಡಿದರು.

ಶ್ರೀ ಗಂಗಾ ಸಹಕಾರಿ ಸಂಘದ ಅಧ್ಯಕ್ಷ ರತ್ನಾಕರ ಕುಂದಾಪುರ ಮಾತನಾಡಿ, ಗಂಗಾಮತ ಸಮಾಜವು ಅಂಬಿಗ, ಮೊಗವೀರ, ಸುಣಗಾರ, ಟೋಕರಿಕೋಳಿ, ಬಾರ್ಕಿ, ಕೋಲಕಾರ, ಬೆಸ್ತ, ಗಂಗಾಮತ, ಗಂಗಿಮಕ್ಕಳು, ಕೋಳಿಮಾದೇವ, ಕೋಳಿ, ಕಬ್ಬಲಿಗ ಸೇರಿದಂತೆ 39 ಪರ್ಯಾಯ ಪದನಾಮಗಳಿಂದ ಕರೆಯಲ್ಪಡುತ್ತದೆ. ನಾವೆಲ್ಲರೂ ಒಂದೇ ಕೋಮಿಗೆ ಸೇರಿದವರಾಗಿದ್ದು, ರಾಜ್ಯದಲ್ಲಿ ಒಟ್ಟು 60 ಲಕ್ಷ ಜನಸಂಖ್ಯೆ ಹೊಂದಿದ್ದರೂ ಕೆಲ ಪಟ್ಟಭದ್ರ ಹಿತಾಸಕ್ತಿಗಳಿಂದ ಒಂದಾಗಲು ಆಗುತ್ತಿಲ್ಲ ಎಂದರು.

ಬಡ ಕುಟುಂಬದಲ್ಲಿ ಯಾರಾದರೂ ಮರಣ ಹೊಂದಿದರೆ ಅಂತ್ಯಕ್ರಿಯೆಗೆ ತಲಾ 2 ಸಾವಿರ ರೂ.ಗಳನ್ನು ವೈಯಕ್ತಿಕವಾಗಿ ನೀಡಲಾಗುವುದು. ಮುಂದಿನ ದಿನಗಳಲ್ಲಿ ಶ್ರೀ ಗಂಗಾ ಸಹಕಾರಿ ಸಂಘದ ವತಿಯಿಂದ ಹೆಚ್ಚಿನ ಧನ ಸಹಾಯ ನೀಡಲು ಆಡಳಿತ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಲಾಗುವುದು. ಪ್ರತಿವರ್ಷ ಶ್ರೀ ಗಂಗಾ ಸಹಕಾರಿ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕಾಗಿ ನೀಡುವ 1.5 ಲಕ್ಷ ರೂ. ಗಳಲ್ಲಿ 75 ಸಾವಿರ ರೂ.ಗಳನ್ನು ಸಮಾಜದ ಮಕ್ಕಳಿಗೆ ಪುರಸ್ಕಾರ ನೀಡಲು ಮೀಸಲಿಡುವುದಾಗಿ ಭರವಸೆ ನೀಡಿದರು.

ನ್ಯಾಯವಾದಿಗಳಾದ ಎಂ.ಬಿ. ಚಿನ್ನಪ್ಪನವರ, ಹನುಮಂತಪ್ಪ ಬಾರ್ಕಿ, ಸಮಾಜದ ಮುಖಂಡರಾದ ಕೃಷ್ಣಮೂರ್ತಿ ಸುಣಗಾರ, ಸುನೀತಾ ಬಾರ್ಕಿ, ನಿತ್ಯಾನಂದ ಕುಂದಾಪುರ, ಟಿ. ಮಹಾಂತೇಶ ಸಂಘಟನೆ ಕುರಿತು ಮಾತನಾಡಿದರು. ರಾಜೇಂದ್ರ ಅಂಬಿಗೇರ, ರವಿ ಜಾಡಮಲಿ, ಸುರೇಶ ಸುಣಗಾರ, ಮನೋಹರ ಸುಣಗಾರ, ಕೊಟ್ರೇಶ್ ಕುಂದಾಪುರ, ರಮೇಶ ಬಾರ್ಕಿ, ಲಕ್ಷ್ಮಣ ದಾಸರ, ಗುತ್ತೆಪ್ಪ ಬಾರ್ಕಿ, ಪ್ರಶಾಂತ ಕುಂಬಳೂರ, ಅನ್ನಪೂರ್ಣ ಬಾರ್ಕಿ, ಆಂಜನೇಯ ಬಾಳಿಕಾಯಿ ಮತ್ತು ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte